# ‘ಶ್ರೀ’ ಪದ್ಧತಿಯಲ್ಲಿ ಭತ್ತದ ವ್ಯವಸಾಯ

## ಭತ್ತದ ಪೈರಿನ ಇಳುವರಿಯಲ್ಲಿ ಸಂಪೂರ್ಣ ಸಾಮರ್ಥ್ಯ



CSA

OUTREACH

SCIAF
Scotland's aid agency

WASSAN

## ಭತ್ತದ ಬೆಳೆಯ ಅಧಿಕ ಉತ್ಪಾದನೆಗೆ :

- ಒಂದು ಪೈರು ಬಿಡುವ ಕವಲುಗಳ ಸಂಖ್ಯೆ ಹೆಚ್ಚಾಗಿ ಇರಬೇಕು
- ಪೈರು ಇಡುವ ಕವಲುಗಳ ಜೊತೆಗೆ ವಡೆಗಳ ಸಂಖ್ಯೆ ಹೆಚ್ಚಾಗಿ ಇರಬೇಕು
- ವಡೆಗಳಲ್ಲಿ ಬೀಜಗಳ ಸಂಖ್ಯೆ ಹೆಚ್ಚಾಗಿ ಇರಬೇಕು
- ಬೀಜಗಳ ತೂಕ ಹೆಚ್ಚಾಗಿ ಇರಬೇಕು

ಇವನ್ನು ಸಾಧಿಸಲು 'ಶ್ರೀ' ಪದ್ಧತಿ ವ್ಯವಸಾಯ ಅತ್ಯುಪಯುಕ್ತ.

ಈ ಸೂತ್ರಗಳನ್ನು ಹಾಗೂ ಅವಕಾಶಗಳನ್ನು ತಿಳಿಯಪಡಿಸುವುದೇ ಈ ಪುಸ್ತಕದ ಉದ್ದೇಶ.

'ಶ್ರೀ' ಪದ್ಧತಿಯಲ್ಲಿ ಭತ್ತದ ವ್ಯವಸಾಯ
ಪ್ರಥಮ ಮುದ್ರಣ : ಜೂನ್, 2005
ಮರು ಮುದ್ರಣ : ಡಿಸೆಂಬರ್, 2006
ಪ್ರತಿಗಳ ಸಂಖ್ಯೆ : 3000

**ಪ್ರಕಾಶಕರು:**
**ವಾಸನ್**
(ವಾಟರ್‌ಶೆಡ್ ಸಪೋರ್ಟ್ ಸರ್ವೀಸ್ ಅಂಡ್ ಆ್ಯಕ್ಟಿವಿಟಿಸ್ ನೆಟ್‌ವರ್ಕ್)
12–13–452, ಬೀದಿ ನಂ. 1, ತಾರ್‍ನಾಕ, ಸಿಕಂದರ್‌ಬಾದ್ – 500017
ಫೋನ್: 040–27015295 / 27015296, 55284580

**ಸಿ.ಎಸ್.ಎ.**
ಸುಸ್ಥಿರ ವ್ಯವಸಾಯ ಕೇಂದ್ರ : 12–13–445, ಬೀದಿ ನಂ. 1, ತಾರ್‍ನಾಕ್, ಸಿಕಂದರ್‌ಬಾದ್–17
ಫೋನ್ : 040–27017735

**ಡಬ್ಲ್ಯು. ಡಬ್ಲ್ಯು. ಎಫ್.**
ಇಕ್ರಿಸ್ಯಾಟ್, ಪಟಾನ್‌ಚೇರು, ಹೈದರಾಬಾದ್, ಫೋನ್ : 040–30713762

**ವಿಷಯ ಸಹಕಾರ ಹಾಗೂ ಛಾಯಾಚಿತ್ರ ಸೌಜನ್ಯ:**
ಕಿಷನ್ ರಾವ್, 'ಸುಕ್ಷೇತ್ರಂ', ಹೈದರಾಬಾದ್.
ಡಬ್ಲ್ಯು. ಡಬ್ಲ್ಯು. ಎಫ್., ಇಕ್ರಿಸ್ಯಾಟ್, ಹೈದರಾಬಾದ್.
ಕ್ರಿಸ್ಪ್ (ಸಿ.ಆರ್.ಐ.ಎಸ್.ಪಿ), ಇಕ್ರಿಸ್ಯಾಟ್, ಹೈದರಾಬಾದ್.
ಜಗದೀಶ್ವರ ರಾಜು, ಎಡಿಎ, ಮುಮ್ಮಿಡಿವರಂ.
ಆಚಾರ್ಯ ಎನ್.ಜಿ. ರಂಗಾ ವ್ಯವಸಾಯ ವಿಶ್ವವಿದ್ಯಾಲಯ.
ಸೀತಾ ರಾಮಸ್ವಾಮಿ, ಹೈದರಾಬಾದ್.
ಪೀಪಲ್ಸ್ ಸೈನ್ಸ್ ಇನಿಸ್ಟಿಟ್ಯೂಟ್ (ಪಿಐಎಸ್‌ಐ), ಡೆಹ್ರಾಡೂನ್.

**ಕನ್ನಡಕ್ಕೆ ಅನುವಾದ ಮತ್ತು ಪ್ರಕಾಶನ:**
**ಔಟ್‌ರೀಚ್**
109, ಕೋಲ್ಸ್ ರಸ್ತೆ, ಫ್ರೇಜರ್ ಟೌನ್,
ಬೆಂಗಳೂರು–560005
ಫೋನ್ : 2554 5365


**ಈ ಯೋಜನೆಯ ಪ್ರಾಯೋಜಕರು:**
*The project supported by:*
European Union
Scottish Catholic International Aid Fund

# ಭತ್ತದ ಪೈರಿನ ಸಂಪೂರ್ಣ ಶಕ್ತಿ, ಸಾಮರ್ಥ್ಯವನ್ನು ಸಮರ್ಥವಾಗಿ ಉಪಯೋಗಿಸಲು...

ಈ ಸೃಷ್ಟಿಯಲ್ಲಿ ತಮ್ಮ ಆಹಾರವನ್ನು
ತಾವೇ ತಯಾರು ಮಾಡಿಕೊಳ್ಳುವುದು
ಹಸಿರು ಸಸಿಗಳು ಮಾತ್ರ




ಆಹಾರವನ್ನು ತಯಾರು ಮಾಡಲು ಸಸಿಗಳಿಗೆ ಬೇಕಾಗಿರುವುದೇನು?




ಸ್ವಂತವಾಗಿ ಆಹಾರ ತಯಾರಿಸಿಕೊಳ್ಳುವ ಸಸಿಗಳು
ರಾಸಾಯನಿಕ ಗೊಬ್ಬರ, ಔಷಧಿಗಳನ್ನು
ಅವಲಂಬಿಸುವುದು ಸರಿಯೇ?





ರೈತರು ಸಾಲಗಾರರಾಗಲು
ಇದೂ ಒಂದು ಕಾರಣವಲ್ಲವೇ?



ಸಸಿಗಳು ತಮ್ಮ ಪೂರ್ಣ ಶಕ್ತಿ,
ಸಾಮರ್ಥ್ಯವನ್ನು
ಉಪಯೋಗಿಸಿಕೊಳ್ಳಬೇಕಾದರೆ ...

- ನೀರು, ಪೌಷ್ಠಿಕ ಪದಾರ್ಥಗಳನ್ನು ತೆಗೆದುಕೊಳ್ಳುವ ಬೇರುಗಳು ಆರೋಗ್ಯಕರವಾಗಿ, ಚೆನ್ನಾಗಿ ವಿಸ್ತರಿಸುವಂತೆ ನೋಡಿಕೊಳ್ಳಬೇಕು
- ಇದಕ್ಕೆ ಫಲವತ್ತಾದ ಭೂಮಿ ಮತ್ತು ಅನೇಕ ವಿಧದ ಸೂಕ್ಷ್ಮಾಣುಗಳ ಹೊರತಾಗಿಯೂ ಜೀವಿಸುವ ಸಾಮರ್ಥ್ಯ ಅಗತ್ಯ
- ಸಸಿಯು ಆರೋಗ್ಯಕರವಾಗಿ, ಪುಷ್ಠಿಕರವಾಗಿ ಬೆಳೆಯಬೇಕು

ಇದಕ್ಕೆ ಸಹಾಯಕಾರಿಯಾಗಿರುವದು "ಶ್ರೀ" ಪದ್ಧತಿ, ಇದನ್ನು ಭತ್ತ, ರಾಗಿ, ಕಬ್ಬಿನಂತಹ ಬೆಳೆಗಳಿಗೆ ಅನುಸರಿಸಬಹುದು. ಇಲ್ಲಿ ಭತ್ತ ಬೆಳೆಯುವ ಶ್ರೀ ಪದ್ಧತಿ ಬಗ್ಗೆ ತಿಳಿದುಕೊಳ್ಳೋಣ.



# 1. ಶ್ರೀ ಪದ್ಧತಿ ಅಂದರೆ...

**ಸಿಸ್ಟಂ ಆಫ್ ರೈಸ್ ಇಂಟೆನ್ಸಿಪಿಕೇಷನ್ ಅನ್ನುವ ಆಂಗ್ಲ ಪದದ ಅಕ್ಷರಗಳಾದ ಎಸ್.ಆರ್.ಐ (SRI) – ಇದಕ್ಕೆ ಅನುಗುಣವಾಗಿ ಈ ಬೇಸಾಯ ಪದ್ಧತಿಯನ್ನು ಕನ್ನಡದಲ್ಲಿ "ಶ್ರೀ" ಪದ್ದತಿ ಎಂದು ಕರೆಯಲಾಗಿದೆ. ಇದನ್ನು 1983ರಲ್ಲಿ ಮಡಗಾಸ್ಕರ್‌ನಲ್ಲಿ ಅಭಿವೃದ್ಧಿ ಪಡಿಸಲಾಯಿತು. ಈಗ ಪ್ರಪಂಚದ ಎಲ್ಲಾ ದೇಶಗಳಲ್ಲೂ, ಪ್ರಾಂತ್ಯಗಳಲ್ಲೂ ಶ್ರೀ ಪದ್ದತಿಯನ್ನು ಅಳವಡಿಸಲಾಗಿದೆ.**

**"ಶ್ರೀ" ಅನ್ನುವುದು ಒಂದು ಭತ್ತದ ತಳಿ ಅಲ್ಲ...**

**ಇದೊಂದು ಸಾಗುವಳಿ ಪದ್ಧತಿ ಮಾತ್ರ.**

**"ಶ್ರೀ" ಪದ್ಧತಿಯಲ್ಲಿ ಯಾವುದೇ ತಳಿಯ ಭತ್ತದ ಸಾಗುವಳಿ ಮಾಡಬಹುದು.**



**ವಿವಿಧ ಪ್ರದೇಶಗಳಲ್ಲಿ ರೈತರು ಪಾಲಿಸಿದ ಪದ್ಧತಿಗಳು, ಅವರ ಅನುಭವಗಳ ಆಧಾರದ ಮೇಲೆ "ಶ್ರೀ" ಪದ್ಧತಿಯ ಮುಖ್ಯವಾದ ಅಂಶಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಸ್ಥಳೀಯ ಪರಿಸ್ಥಿತಿಗಳಿಗೆ ಅನ್ವಯಿಸುವಂತೆ ಪದ್ಧತಿಗಳನ್ನು ರೂಪಿಸಿ ಅಳವಡಿಸುವ ವಿಷಯುವನ್ನು ರೈತರು ದೃಷ್ಟಿಯಲ್ಲಿಟ್ಟು ಕೊಳ್ಳಬೇಕು.**

ಪ್ರಯೋಗ ಶಾಲೆ, ಪ್ರಯೋಗ ಕ್ಷೇತ್ರಗಳಲ್ಲಿ ರೂಪಿಸುವಂತಹ ಆಧುನಿಕತೆ ಉತ್ತಮವಾದವುವೆಂದು ಶಾಸ್ತ್ರ ಪರಿಣತರು ಹೇಳುತ್ತಾ ಬಂದಿರುತ್ತಾರೆ. ಅದರೆ ಶ್ರೀ ಪದ್ಧತಿಯನ್ನು ರೂಪಿಸಿ, ಅಭಿವೃದ್ಧಿ ಪಡಿಸುವಲ್ಲಿ ರೈತರೇ ಮುಖ್ಯವಾದ ಪಾತ್ರ ವಹಿಸಿರುತ್ತಾರೆ. ಅದಕ್ಕೆ, ಪ್ರತಿಯೊಬ್ಬ ರೈತ ಪ್ರಯೋಗ ಮಾಡುವಂತಹ ವ್ಯಕ್ತಿ, ಅಥವಾ ರೈತ ಶಾಸ್ತ್ರ ಪರಿಣಿತ ಎಂದು ಹೇಳಬಹುದು. ಯಾರೋ ಹೇಳಿದರೆಂದು ಮಾಡುವುದಲ್ಲದೇ ಮೂಲ ಸೂತ್ರಗಳನ್ನು ಅರ್ಥ ಮಾಡಿಕೊಂಡು ಸ್ಥಳೀಯ ಪರಿಸ್ಥಿತಿಗೆ, ಹಾಗು ಸ್ಥಳೀಯವಾಗಿ ಸಿಗುವಂತಹ ಸಂಪನ್ಮೂಲಗಳನ್ನು ಬಳಸಿಕೊಂಡು ಏನು ಮಾಡಬೇಕೆಂದು ತೀರ್ಮಾನಿಸುವುದು "ಶ್ರೀ" ಪದ್ಧತಿಯಲ್ಲಿ ಬಹುಮುಖ್ಯವಾದ ಅಂಶ.

**ಭತ್ತದ ಸಸಿಗೆ ಇರುವ ಗರಿಷ್ಟ ಸಾಮರ್ಥ್ಯವನ್ನು ಬಳಸಿ ಹೆಚ್ಚಿನ ಇಳುವರಿ ಪಡೆಯಬೇಕೆಂದರೆ :**

- ಪ್ರತಿ ಸಸಿಯ ಕವಲುಗಳ ಸಂಖ್ಯೆ ಹೆಚ್ಚಾಗಿ ಇರಬೇಕು
- ಪ್ರತಿ ಕವಲಿನಿಂದ ತೆನೆ ಬರುವ ವಡೆ ಹೆಚ್ಚಾಗಿ ಇರಬೇಕು
- ಭತ್ತದ ತೆನೆ ಉದ್ದವಾಗಿ, ಹೆಚ್ಚಿನ (ಬೀಜಗಳು) ಕಾಳುಗಳು ಇರಬೇಕು
- ಕಾಳುಗಳ (ಬೀಜಗಳ) ತೂಕ ಹೆಚ್ಚಾಗಿ ಇರಬೇಕು
- ಸಸಿ ಆರೋಗ್ಯಕರವಾಗಿ ಚೆನ್ನಾಗಿ ಇರಬೇಕು
- ಬೇರುಗಳು ಆರೋಗ್ಯಕರವಾಗಿ ಚೆನ್ನಾಗಿ ವಿಸ್ತರಿಸಿರಬೇಕು

ಮೇಲಿನವುಗಳನ್ನು ಸಾಧಿಸಲು ಇರುವ ವಿವಿಧ ಪದ್ಧತಿಗಳನ್ನು ಇಲ್ಲಿ ತಿಳಿದುಕೊಳ್ಳೋಣ. ಇವುಗಳಿಗೆ ಇರುವ ಅವಕಾಶಗಳ ಜೊತೆಗೆ ಸಮಸ್ಯೆಗಳು, ಇತಿ–ಮಿತಿಗಳು, ಸವಾಲುಗಳನ್ನು ಕೂಡ ತಿಳಿದುಕೊಳ್ಳೋಣ. ರೈತರ ಭೂಮಿಯನ್ನು ಪ್ರಯೋಗಶಾಲೆಗಳನ್ನಾಗಿ ಪರಿವರ್ತಿಸೋಣ.

# "ಶ್ರೀ" ಪದ್ಧತಿಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ಸಹಾಯಕಾರಿಯಾಗುವ ಅಂಶಗಳು

**ನಾಟಿ ಮಾಡುವುದು :**

ದೂರ ದೂರವಾಗಿ ನಾಟಿ ಮಾಡುವುದರಿಂದ ಸಸಿ ಬೆಳೆಯಲು ಹೆಚ್ಚಿನ ಜಾಗ, ಗಾಳಿ ಮತ್ತು ಬೆಳಕು ಸಿಗುತ್ತದೆ. ಇದರಿಂದ ಒಂದೊಂದು ಸಸಿಗೂ ಹೆಚ್ಚಿನ ಕವಲುಗಳು ಬೆಳೆಯಲು ಅವಕಾಶವಿರುತ್ತದೆ. ವಡೆ (ಮೊಗ್ಗು) ಕೂಡ ಆರೋಗ್ಯಕರವಾಗಿ, ಚೆನ್ನಾಗಿ ಬೆಳೆದು ಪೌಷ್ಠಿಕ ಪದಾರ್ಥಗಳನ್ನು ಹೆಚ್ಚಾಗಿ ತೆಗೆದುಕೊಳ್ಳುತ್ತದೆ. ಸಸಿ ಆರೋಗ್ಯಕರವಾಗಿ, ಗಟ್ಟಿಯಾಗಿ ಇರುವುದರಿಂದ ಹೆಚ್ಚಿನ ಕವಲುಗಳಿಂದ ತೆನೆ ಬಿಡುತ್ತವೆ. ತೆನೆ ಉದ್ದವಾಗಿ ಇದ್ದು, ಅದರಲ್ಲಿ ಹೆಚ್ಚಿನ ಬೀಜಗಳು ಇರುತ್ತವೆ. ಬೀಜದ ತೂಕವೂ ಸಹ ಹೆಚ್ಚಾಗಿ ಇರುತ್ತದೆ.





**ಕಡಿಮೆ ಬೀಜ :**

ಸಸಿಯಿಂದ ಸಸಿಗೆ ಹೆಚ್ಚಿನ ಅಂತರವಿಟ್ಟು ನಾಟಿ ಮಾಡುವುದರಿಂದ ಬೀಜಗಳ ಅವಶ್ಯಕತೆ ಕಡಿಮೆ ಇರುತ್ತದೆ. ಇದರಿಂದ ಮೇಲೆ ಹೇಳಿದಂತಹ ಉಪಯೋಗಗಳಲ್ಲದೆ ಒಳ್ಳೆಯ ಗುಣಮಟ್ಟದ ಬೀಜಗಳ ಬಳಕೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು ಸುಲಭವಾಗುತ್ತದೆ.

**ಎಳೇ ಸಸಿ ನಾಟಿ ಮಾಡುವುದು :**

ಭತ್ತದ ಸಸಿ ಎರಡು ಎಲೆ ಬಿಡುವ ಹಂತದಲ್ಲಿ ನಾಟಿ ಮಾಡಬೇಕು. ಈ ಹಂತದಲ್ಲಿ ಸಸಿಯನ್ನು ಕಿತ್ತ ತಕ್ಷಣ, ಜಾಗರೂಕತೆಯಿಂದ ನಾಟಿ ಮಾಡುವುದರಿಂದ ಸಸಿ ಆರೋಗ್ಯಕರವಾಗಿ ಬೆಳೆದು ಹೆಚ್ಚಿನ ಮರಿಗಳನ್ನು ಬಿಡುತ್ತದೆ. ಹೆಚ್ಚಿನ ಇಳುವರಿ ಕೊಡುವ ಸಾಮರ್ಥ್ಯವನ್ನು ಸಹ ಪಡೆಯುತ್ತದೆ.





**ಕಡಿಮೆ ನೀರು :**

ಗದ್ದೆಯಲ್ಲಿ ನೀರು ನಿಲ್ಲಿಸಿದಾಗ ಸಸಿಯ ಬೇರಿಗೆ ಗಾಳಿ ಸಿಗದೆ ಬಹುಪಾಲು ಸಸಿಗಳು ಸತ್ತು ಹೋಗುತ್ತವೆ. ಸತ್ತು ಹೋದ ಸಸಿಯ ಬೇರು ಗೋಧಿ ಬಣ್ಣದ್ದಾಗಿರುತ್ತದೆ. ಭೂಮಿಯಲ್ಲಿ ಮಣ್ಣಿನ ಫಲವತ್ತತೆ, ಗಾಳಿ, ತೇವ ಸಮಾನ ಪ್ರಮಾಣದಲ್ಲಿ ಇರಬೇಕು. ಸಾಮಾನ್ಯವಾಗಿ ಗದ್ದೆಯಲ್ಲಿ ನೀರು ನಿಲ್ಲಿಸದಿದ್ದಾಗ ಸಹ ಭತ್ತದ ಸಸಿ ಬದುಕುತ್ತದೆ. ಅದರೆ ಭತ್ತದ ಸಸಿ ಆರೋಗ್ಯಕರವಾಗಿ ಬೆಳೆಯಬೇಕಾದರೆ ನೀರು ನಿಲ್ಲಿಸಬಾರದು. ಭಾಗಶಃ ತೊಯ್ದ ಸ್ಥಿತಿಯಲ್ಲಿ ನೀರನ್ನು ಇಟ್ಟರೆ ಸಸಿಯ ಬೇರಿಗೆ ಗಾಳಿ ಚೆನ್ನಾಗಿ ಸಿಕ್ಕಿ ಆರೋಗ್ಯಕರವಾಗಿ ಬೆಳೆಯುತ್ತದೆ.

**ಕಳೆಯನ್ನು ನೆಲದಲ್ಲಿ ಬೆರೆಸಿಬಿಡುವುದು :**

ಕಳೆಯನ್ನು ತೆಗೆದು ಹೊರಗಡೆ ಹಾಕುವುದಕ್ಕಿಂತ "ಕಳೆತೆಗೆಯುವ" ಸಲಕರಣೆಯನ್ನು ಉಪಯೋಗಿಸಿ ನೆಲದಲ್ಲೇ ಬೆರೆಸಿ ಬಿಡುವುದರಿಂದ ಎರಡು ಪ್ರಯೋಜನಗಳು ಇವೆ. ಮೊದಲನೆಯದು ನೆಲಕ್ಕೆ ಗಾಳಿ ಸಿಗುತ್ತದೆ. ಎರಡನೇಯದು ಕಳೆಗಳು ಅಲ್ಲೇ ಕೊಳೆತು ಗೊಬ್ಬರ ಪದಾರ್ಥವಾಗಿ ಮಾರ್ಪಾಡಾಗುತ್ತವೆ. ಈ ಎರಡರಿಂದ ಬೇರು ಮತ್ತು ಸಸಿ ಆರೋಗ್ಯಕರವಾಗಿ ಬೆಳದು ಅಧಿಕ ಇಳುವರಿ ಪಡೆಯಲು ಸಹಕಾರಿಯಾಗಿರುತ್ತದೆ.





**ಸಾವಯವ ಗೊಬ್ಬರದ ಉಪಯೋಗ :**

ಸಾವಯವ ಪದಾರ್ಥಗಳು ಭೂಮಿಯೊಳಗಿನ ಜೀವಕೋಟಿಗೆ ಆಹಾರ. ಸಾವಯವ ಗೊಬ್ಬರ ಉಪಯೋಗಿಸುವುದರಿಂದ ಭೂಮಿಯೊಳಗಿನ ಸೂಕ್ಷ್ಮಜೀವಿಗಳು ವೃದ್ಧಿಸುತ್ತವೆ. ಇವು ಸಸಿಗೆ ಪೌಷ್ಟಿಕ ಪದಾರ್ಥಗಳನ್ನು ಬೇಕಾದ ಸಮಯಕ್ಕೆ ಕೊಟ್ಟು ಅಧಿಕ ಇಳುವರಿ ಪಡೆಯುವಲ್ಲಿ ಸಹಕಾರಿಯಾಗಿರುತ್ತವೆ.

# 2. ಸೂಕ್ತ ಭೂಮಿಯ ಆಯ್ಕೆ

**ಸೂಕ್ತ ಭೂಮಿಯ ಆಯ್ಕೆ :**

- ಚೌಳು ರಹಿತ ಭೂಮಿ, ನೀರು ಇಡಲು ಹಾಗು ಹೊರಗಡೆ ತೆಗೆಯಲು ಸಮತಲವಾದ ಭೂಮಿ
- ಫಲವತ್ತಾದ ಭೂಮಿ

"ಶ್ರೀ" ಪದ್ಧತಿಯನ್ನು ಅಳವಡಿಸಿಕೊಳ್ಳುವವರು ಮೊದಲು ಮಣ್ಣು ಪರೀಕ್ಷೆ ಮಾಡಿಸಿ ಎಲ್ಲಾ ವಿವರಗಳನ್ನು ತಿಳಿದುಕೊಳ್ಳಬೇಕು.

**"ಶ್ರೀ ಪದ್ಧತಿಯಲ್ಲಿ ಭತ್ತ ಬೆಳೆಯಲು ಇಚ್ಛಿಸುವವರು :**

- ❖ ಗದ್ದೆಯನ್ನು ಚೆನ್ನಾಗಿ ಹದ ಮಾಡಿಕೊಳ್ಳಬೇಕು
- ❖ ಹೆಚ್ಚಿಗೆ ಇರುವ ನೀರು ಹೋಗಲು ಕಾಲುವೆಗಳನ್ನು ಅವಶ್ಯಕತೆಗೆ ತಕ್ಕಂತೆ ನಿರ್ಮಿಸಿಕೊಳ್ಳಬೇಕು
- ❖ ಸಣ್ಣ ಸಣ್ಣ ಗದ್ದೆಗಳನ್ನು ಏರ್ಪಾಡು ಮಾಡಿಕೊಳ್ಳಬೇಕು

**ಸಮಸ್ಯೆಗಳು, ಸವಾಲುಗಳು**

ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತ ಬೆಳೆಯುವವರು ಮುಂಚಿತವಾಗಿ ಸಸಿ ಮಡಿ ಮಾಡಿ ಕಾಲುವೆಗಳಲ್ಲಿ ನೀರು ಬರುವುದರೊಳಗೆ ನಾಟಿ ಮಾಡಲು ಸಿದ್ದರಾಗುತ್ತಾರೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಕೆರೆ ಆಶ್ರಯದಲ್ಲಿ ಭತ್ತ ಬೆಳೆಯುವವರು ಕೆರೆ ತುಂಬಿದಾಗ ನಾಟಿ ಮಾಡಲು ಮುಂದಾಗುತ್ತಾರೆ. ಬೆಳೆಗಳ ಕ್ರಮಗಳಲ್ಲಿ "ಹಸಿರೆಲೆ ಬೆಳೆ" ಬೆಳೆಯುವುದೊಂದು ಭಾಗವಾಗಿರುವುದರ ಬಗ್ಗೆ ಸಂಶೋಧನೆಯಾಗಬೇಕು. ಕಡಿಮೆ ನೀರಿನಲ್ಲಿ "ಹಸಿರೆಲೆ ಬೆಳೆ" ಬೆಳೆಸುವುದಲ್ಲದೆ ಅವು ತಕ್ಷಣ ಕೊಳೆಯುವಂತೆ ಮಾಡುವ ವಿಧಾನಗಳನ್ನು ಕಂಡುಹಿಡಿಯಬೇಕು.

ಕೆರೆಹೂಳು ಹಾಕಿದ ಭೂಮಿ



## 2.1 ಉಪ್ಪುಗಟ್ಟಿದಂತಹ ಭೂಮಿ (ಚೌಳು ಭೂಮಿ)

ಶ್ರೀ ಪದ್ಧತಿಯಲ್ಲಿ ಭತ್ತ ಸಾಗುವಳಿ ಮಾಡಲು ಉಪ್ಪುಗಟ್ಟಿದಂತಹ ಭೂಮಿಗಳನ್ನು ಉಪಯೋಗಿಸಲಾಗುವುದಿಲ್ಲ. ಉಪ್ಪುಗಟ್ಟಿದಂತಹ ಭೂಮಿಯಲ್ಲಿ ನೀರು ನಿಲ್ಲಿಸಿ ಭತ್ತ ಸಾಗುವಳಿ ಮಾಡಿದಾಗ ಒಳ್ಳೆಯ ಇಳುವರಿ ಬರುತ್ತದೆ. ಅದರೆ ಶ್ರೀ ಪದ್ಧತಿಯಲ್ಲಿ ನೆಲವನ್ನು ಆಗಾಗ ನೆನಸಿ ಒಣಗಿಸುತ್ತಿರಬೇಕು. ಈ ರೀತಿ ಒಣಗಿಸಿದಾಗ ಉಪ್ಪುಗಟ್ಟಿದಂತಹ ಭೂಮಿಯಲ್ಲಿ ಉಪ್ಪು ಲವಣಗಳು ಮೇಲೆ ಬರುತ್ತವೆ. ಇದರಿಂದ ಭತ್ತದ ಸಸಿಗಳು ಸತ್ತು ಹೋಗುತ್ತವೆ.

## 2.2 ಸಮತಲವಾದ ಭೂಮಿ

ಶ್ರೀ ಪದ್ಧತಿಯಲ್ಲಿ ಭತ್ತ ಸಾಗುವಳಿ ಮಾಡಲು ಆಯ್ಕೆ ಆಗುವ ಭೂಮಿ ಸಮತಟ್ಟಾಗಿರಬೇಕು. ನೀರು ಹರಿಸುವಾಗ ಗದ್ದೆಯಲ್ಲಿ ಸಮವಾಗಿ ಹರಡಬೇಕು. ಅದೇ ರೀತಿ ಗದ್ದೆಯಲ್ಲಿ ಹೆಚ್ಚಿನ ನೀರು ಇರುವಾಗ ಅದನ್ನು ತೆಗೆದುಹಾಕಲು ಕಾಲುವೆ ಸೌಲಭ್ಯವಿರಬೇಕು.

## 2.3 ಭೂಮಿಯ ಫಲವತ್ತತೆ

ಶ್ರೀ ಪದ್ಧತಿಯಲ್ಲಿ ರಾಸಾಯನಿಕ ಗೊಬ್ಬರಕ್ಕಿಂತ ಹೆಚ್ಚಿನ ಸಾವಯವ ಗೊಬ್ಬರ ಉಪಯೋಗಿಸುವುದರಿಂದ ಒಳ್ಳೆಯ ಫಲಿತಾಂಶ ಸಿಗುತ್ತದೆ. ಸಾವಯವ ಪದಾರ್ಥ ಸೂಕ್ಷ್ಮ ಜೀವಿಗಳಿಗೆ ಆಹಾರವಾಗಿ ಇರುವುದರಿಂದ ಸಸಿಗೆ ಬೇಕಾಗಿರುವ ಪೌಷ್ಠಿಕ ಪದಾರ್ಥಗಳು ಸಿಗುತ್ತವೆ. ಸೂಕ್ಷ್ಮಜೀವಿಗಳು ಇದ್ದಾಗ ಭತ್ತದ ಸಸಿಗಳು ಆರೋಗ್ಯಕರವಾಗಿ ಬೆಳೆದು, ರೋಗ ಮತ್ತು ಕೀಟಗಳನ್ನು ಎದುರಿಸಿ ಅಧಿಕ ಇಳುವರಿಯನ್ನು ಕೊಡುತ್ತವೆ. ಅದುದರಿಂದ ಸಾವಯವ ಗೊಬ್ಬರಗಳ ಮೂಲಕ ಭೂಸಾರವನ್ನು ಹೆಚ್ಚಿಸುವ ಪದ್ದತಿಗಳನ್ನು ಮೊದಲಿನಿಂದ ಆಳವಡಿಸುವುದು ಅವಶ್ಯಕ. ಕೆಳಗೆ ಹೇಳಿದಂತಹ ಕನಿಷ್ಠ ಎರಡು ಪದ್ಧತಿಗಳನ್ನು ತಪ್ಪದೆ ಪಾಲಿಸಬೇಕು.

## ಕೆರೆ ಹೂಳು ಹಾಕುವುದು

ಪ್ರತಿ ಮೂರು ವರ್ಷಕ್ಕೊಮ್ಮೆ ಎಕರೆಗೆ 15–20 ಎತ್ತಿನ ಗಾಡಿಗಳಷ್ಟು ಕೆರೆ ಹೂಳು ಹಾಕಬೇಕು. ಇದರಿಂದ ಭೂಮಿಯ ತೇವಾಂಶ ಹಿಡಿದಿಟ್ಟುಕೊಳ್ಳುವ ಶಕ್ತಿ ಬೆಳೆದು ಬೆಳೆಯ ಇಳುವರಿ ಅಧಿಕವಾಗುತ್ತದೆ.

## ತಿಪ್ಪೆ ಗೊಬ್ಬರ

"ಶ್ರೀ" ಪದ್ಧತಿಯಲ್ಲಿ ಸಾಗುವಳಿ ಮಾಡುವ ಭತ್ತಕ್ಕೆ ಸಂಪೂರ್ಣವಾಗಿ ಕೊಳೆತ ತಿಪ್ಪೆ ಗೊಬ್ಬರ/ಸಗಣಿಯನ್ನು ತಪ್ಪದೆ ಸರಿಯಾಗಿ ಹಾಕಬೇಕು. ಎಕರೆಗೆ ಕನಿಷ್ಠ ಹದಿನೈದು ಎತ್ತಿನ ಗಾಡಿ ಅಥವಾ ಮೂರು ಟ್ರ್ಯಾಕ್ಟರ್ (6 ಟನ್ನು) ಸಗಣಿ ಗೊಬ್ಬರ ಸರಿಹೋಗುತ್ತದೆ. ಗೊಬ್ಬರವು ಒಳ್ಳೆಯ ಗುಣಮಟ್ಟದ್ದಾಗಿ ಇರಬೇಕು. ಈ ಕ್ರಮದಲ್ಲಿ ಇತ್ತೀಚೆಗೆ ಹೂಳು ಗೊಬ್ಬರ ತಯಾರಿಸುವುದು ಮತ್ತು ಬಳಕೆ ಸಹ ಹೆಚ್ಚಾಗುತ್ತಿದೆ.

## ಹಸಿರೆಲೆ ಬೆಳೆ

ಹಸಿರೆಲೆ ಬೆಳೆ ಭೂಮಿಯ ಲವಣಾಂಶ (ಸಾರಜನಕ) ಹೆಚ್ಚಿಸಲು ಬಹಳ ಸಹಕಾರಿಯಾಗುತ್ತದೆ. ಹಸಿರೆಲೆ ಬೆಳೆಯನ್ನು ಹೂ ಬಿಡುವ ಹಂತದಲ್ಲಿ ಇದ್ದಾಗ ಅದರ ಮೇಲೆ ಉಳುಮೆಮಾಡಿ, ನೆಲದಲ್ಲಿ ಬೆರಸಿ ಕೊಳೆಯಲು ಬಿಡುತ್ತಾರೆ. ಸಾಧಾರಣವಾಗಿ ಕಡಲೆ, ಸೆಣಬು ಮತ್ತು ಹುರಳಿಯಂತಹ ಬೆಳೆಗಳನ್ನು ಹಸಿರೆಲೆ ಬೆಳೆಯಾಗಿ ಸಾಗುವಳಿ ಮಾಡುತ್ತಾರೆ. ಹಸಿರೆಲೆ ಬೆಳೆ ಬೆಳೆಯಲು 45 ದಿನ, ಅದು ಕೊಳೆಯಲು ಹತ್ತು ದಿನ ಬೇಕಾಗುತ್ತದೆ. ಹಸಿರೆಲೆ ಬೆಳೆಯನ್ನು ಉಳುಮೆಮಾಡಿ, ನೆಲದಲ್ಲಿ ಬೆರೆಸಿದ ದಿನ ಸಸಿ ಮಡಿ ಬಿತ್ತಿದರೆ (ಹಾಕಿಕೊಂಡರೆ) ಹಸಿರೆಲೆ ಬೆಳೆ ಕೊಳೆತು ಹೋಗುವ ಸಮಯಕ್ಕೆ ಪೈರು / ಸಸಿ ನಾಟಿಮಾಡಲು ತಯಾರಾಗುತ್ತದೆ. ಹಸಿರೆಲೆ ಬೆಳೆ ಸಾಗುವಳಿ ಮಾಡಲು ಹಾಗೂ ಕೊಳೆಯಲು ಅವಶ್ಯವಿರುವ ನೀರಿನ ಸೌಲಭ್ಯ, ಸಮಯ ಇರುವಂತೆ ನೋಡಿಕೊಳ್ಳಬೇಕು.

## ಪಶುಗಳ ಹಿಂಡು/ಮಂದೆ ಕೂಡಿಸುವುದು

ಇದು ಸಾಂಪ್ರದಾಯಕವಾಗಿ ಅಳವಡಿಸುತ್ತಿರುವ ಪದ್ಧತಿ. ಹಸು, ಎಮ್ಮೆ, ಎತ್ತು, ಕುರಿ, ಮೇಕೆಗಳ ಹಿಂಡನ್ನು ಜಮೀನಿನಲ್ಲಿ ರಾತ್ರಿ ಹೊತ್ತು ಕಟ್ಟುತ್ತಾರೆ. ಅವುಗಳ ಗಂಜಲ/ಮೂತ್ರ, ಸಗಣಿಗಳಿಂದ ಜಮೀನಿನ ಸಾರ ಹೆಚ್ಚುತ್ತದೆ.


ಕುರಿಗಳ ಮಂದೆ ಇಡುವುದು


ಹಸಿರೆಲೆಬೆಳೆ


ತಿಪ್ಪೆಗೊಬ್ಬರ

*ಹೊಸದಾಗಿ ಸಮತಲ ಮಾಡಿದ ಗದ್ದೆಗಳಲ್ಲಿ ಮೇಲಿನ ಮಣ್ಣಿನಲ್ಲಿ ಫಲವತ್ತತೆ ಇರುವುದಿಲ್ಲ. ಆದುದರಿಂದ ಹೊಸದಾಗಿ ನಿರ್ಮಿಸಿದ ಗದ್ದೆಯಲ್ಲಿ ಮೊದಲನೇ ವರ್ಷ ಯಾವುದೇ ಬೆಳೆ ಇಟ್ಟರೂ ಇಳುವರಿ ಕಡಿಮೆ ಇರುತ್ತದೆ. ಈ ತರಹದ ಜಮೀನಿನಲ್ಲಿ ಶ್ರೀ ಪದ್ಧತಿ ಅಳವಡಿಸದಿದ್ದರೆ ಒಳ್ಳೆಯದು.*

### ಒಳ್ಳೆಯ ಗುಣಮಟ್ಟದ ತಿಪ್ಪೆ ಗೊಬ್ಬರ ಅಂದರೆ

- ಮೊದಲು ಉಪಯೋಗಿಸಿದ ಪದಾರ್ಥಗಳು ಗುರುತು ಸಿಗದಂತೆ ಸಾಕಷ್ಟು ಕೊಳೆತು ಹೋಗಿರುತ್ತದೆ.
- ತಿಪ್ಪೆ ಗೊಬ್ಬರ ಗೋಧಿ ಬಣ್ಣದಿಂದ ಕಪ್ಪು ಬಣ್ಣದಾಗಿರುತ್ತದೆ
- ಮಣ್ಣಿನ ವಾಸನೆ ಬರುತ್ತದೆ.
- ಮೆತ್ತಗೆ ಇದ್ದು ತೇವಾಂಶದಿಂದ ಕೂಡಿದ್ದು, ಮುದ್ದೆಯಾಗಿರುತ್ತದೆ
- ಕಣ್ಣಿಗೆ ಕಾಣುವ ಕೆಲವು ಸೂಕ್ಷ್ಮಜೀವಿಗಳು ಇರುತ್ತವೆ.

### ಹಸಿರೆಲೆ ಬೆಳೆಯಲ್ಲಿ ದಾಭೋಲ್ಕರ್ ಪದ್ಧತಿ

ಇದು ಇತ್ತೀಚೆಗೆ ಪ್ರಚಾರಕ್ಕೆ ಬರುತ್ತಿರುವ ಪದ್ಧತಿ. ಮಾಮೂಲಗಿ ಹಸಿರೆಲೆ ಬೆಳೆ ಒಂದೇ ಪೈರಿನ, ಅದರಲ್ಲೂ ಬೇಳೆ/ದ್ವಿದಳ ಜಾತಿಯ ಬೆಳೆಯನ್ನು ಸಾಗುವಳಿ ಮಾಡುತ್ತಾರೆ. ಆದರೆ ದಾಭೋಲ್ಕರ್ ಪದ್ಧತಿಯಲ್ಲಿ ಈ ಕೆಳಗೆ ಹೇಳಲಾದ ಪ್ರತಿಯೊಂದರಿಂದ, ಕನಿಷ್ಠ ನಾಲ್ಕು ವಿಧಗಳನ್ನು ಆಯ್ಕೆ ಮಾಡಿ ಒಟ್ಟು 20–25 ಕೆ.ಜಿ. ಬೀಜಗಳಿಂದ ಹಸಿರೆಲೆ ಬೆಳೆ ಪೈರಾಗಿ ನಾಟಿ ಮಾಡುತ್ತಾರೆ. ಹೀಗೆ ಮಾಡಲು ಮೊದಲು ನಾಲ್ಕು ಶ್ರೇಣಿಯಿಂದ 6 ಕೆ.ಜಿ. ಬೀಜಗಳನ್ನು ತೆಗೆದುಕೊಳ್ಳಬೇಕು. ಸುಗಂಧ ದ್ರವ್ಯಗಳ ಬೀಜಗಳು ಅರ್ಧ (1/2) ಕೆ.ಜಿ. ತೆಗೆದುಕೊಂಡರೆ ಸರಿಹೋಗುತ್ತದೆ.

- ಏಕದಳ ಅಥವಾ ಧಾನ್ಯ ಬೀಜಗಳು (ಜೋಳ, ನವಣೆ, ಸಜ್ಜೆ, ಕೊರಲೆ, ಸಾಮೆ, ರಾಗಿ)
- ದ್ವಿದಳ ಧಾನ್ಯ, ಬೀಜಗಳು ಅಥವಾ ಬೇಳೆ ಕಾಳು ಬೆಳೆಗಳು (ಹೆಸರು, ಕಡಲೆ, ಉದ್ದು)
- ಎಣ್ಣೆ ಬೀಜಗಳು (ಎಳ್ಳು, ಶೇಂಗಾ, ಹರಳು/ಔಡಲ)
- ಹಸಿರೆಲೆ ಬೆಳೆ (ಹುರಳಿ, ಸೆಣಬು, ಅಲಸಂದಿ ಹೆಸರು ಬೇಳೆ, ಜೀರಿಗೆ)
- ಸುಗಂಧ ದ್ರವ್ಯ (ಧನಿಯಾ, ಮೆಂತ್ಯ, ಓಮಾ, ಸಾಸುವೆ)



# 3. ಭತ್ತದ ಸಸಿ ಬೆಳಸುವುದು

"ಶ್ರೀ" ಪದ್ಧತಿಯಲ್ಲಿ 8–12 ದಿನದ ಭತ್ತದ ಸಸಿಯನ್ನು ನಾಟಿ ಮಾಡುತ್ತಾರೆ. ಆದುದರಿಂದ ಸಸಿ ಮಡಿ ತಯಾರಿಯಲ್ಲಿ, ಸಸಿ ಬೆಳೆಸುವುವಾಗ ಬೇಕಾಗಿರುವ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

## 3.1 ಸಸಿ ಮಡಿ ತಯಾರಿಕೆ

ಸಸಿ ಮಡಿಯ ಅಗಲ ಒಂದು ಗಜ (4 ಅಡಿ) ಇರಬೇಕು. ಅವಶ್ಯಕತೆಗೆ ಅನುಗುಣವಾಗಿ ಉದ್ದವನ್ನು ನಿರ್ಣಯಿಸಿಕೊಳ್ಳಬಹುದು. ಒಂದು ಎಕರೆ ಗದ್ದೆಗೆ ನಾಟಿ ಮಾಡಲು 2 ಕೆ.ಜಿ. ಬೀಜ ಸರಿಹೋಗುತ್ತದೆ. ಅದಕ್ಕೆ 44 ಚದರ ಗಜ / 400 ಚದರ ಅಡಿಯ ಸಸಿ ಮಡಿ ಬೇಕು. ಒಂದು ದೊಡ್ಡ, ಇಲ್ಲವೇ ಸಣ್ಣ ಸಸಿ ಮಡಿಯನ್ನು ಅನುಕೂಲಕ್ಕೆ ಸರಿ ಹೋಗುವಂತೆ ಮಾಡಿಕೊಳ್ಳಬಹುದು. ತರಕಾರಿ, ಹೊಗೆಸೊಪ್ಪು ಸಸಿ ಮಡಿ ಮಾದರಿಯಲ್ಲಿ ಏರು ಸಸಿ ಮಡಿ ತಯಾರು ಮಾಡಿಕೊಳ್ಳಬೇಕು. 8–12 ದಿನಗಳಲ್ಲಿ ಭತ್ತದ ಸಸಿ 3 ಅಂಗುಲ ಬೆಳೆಯುತ್ತದೆ. ಆದುದರಿಂದ ಸಸಿ ಮಡಿ 5–6 ಅಂಗುಲ ಎತ್ತರ ಇರಬೇಕು.

ಸಸಿ ಮಡಿಯನ್ನು ಈ ಕೆಳಗೆ ತಿಳಿಸಿರುವಂತೆ ತಯಾರು ಮಾಡಬೇಕು:

**ಒಂದನೇ ಪದರ :** ಒಂದು ಅಂಗುಲ ಚೆನ್ನಾಗಿ ಬೆರೆತ / ಕೊಳೆತ ದನಗಳ ಗೊಬ್ಬರ (ಕೊಟ್ಟಿಗೆ ಗೊಬ್ಬರ).

**ಎರಡನೇ ಪದರ :** ಒಂದೂವರೆ ಅಂಗುಲ ಮಣ್ಣು

**ಮೂರನೇ ಪದರ :** ಒಂದು ಅಂಗುಲ ಚೆನ್ನಾಗಿ ಬೆರತ ದನಗಳ ಗೊಬ್ಬರ/ ಕೊಳೆತ ದನಗಳ ಗೊಬ್ಬರ (ಕೊಟ್ಟಿಗೆ ಗೊಬ್ಬರ).

**ನಾಲ್ಕನೇ ಪದರ :** ಎರಡುವರೆ ಅಂಗುಲ ಮಣ್ಣು,
ಈ ಪದರಗಳನ್ನು ಚೆನ್ನಾಗಿ ಬೆರೆಸಬೇಕು.

ಸಸಿ ಮಡಿಯ ಸುತ್ತಲು ಕಾಲುವೆ ತೆಗೆಯಬೇಕು. ಮಡಿಯಂಚಿನ ಹಸಿಮಣ್ಣು ಜಾರಿಹೋಗದಂತೆ ಅವಶ್ಯವಿದ್ದಲ್ಲಿ ಸಸಿ ಮಡಿಯ ಸುತ್ತಲೂ ಬಾಳೆದಿಂಡು, ಮಣ್ಣಿನ ಹೆಂಟೆ, ಅಥವಾ ಮರದ ಹಲಗೆಗಳನ್ನು ಇಡಬೇಕು.

ಸಸಿಯ ಬೇರು ನೆಲದೊಳಗೆ ಸುಲಭವಾಗಿ ಇಳಿಯಲು ದನದ ಗೊಬ್ಬರ ಉಪಯೋಗವಾಗುತ್ತದೆ. ಅಷ್ಟೇ ಅಲ್ಲದೆ ಪೂರ್ತಿಯಾಗಿ ಕೊಳೆತ ಗೊಬ್ಬರದಿಂದ ಸಸಿ ಬೆಳೆದಾಗ ರೋಗನಿರೋಧಕ ಶಕ್ತಿ ಸಹ ಪಡೆದುಕೊಳ್ಳುತ್ತದೆ. ನಂತರವೂ ಕೂಡ ಸಂಪೂರ್ಣ ಬೆಳೆ ಯಾವುದೇ ರೋಗವಿಲ್ಲದೆ ಆರೋಗ್ಯಕರವಾಗಿ ಇರುತ್ತದೆ.

### ಕಡಿಮೆ ಬೀಜ ಪ್ರಮಾಣ ಬಳಸುವುದರಿಂದಾಗುವ ಪ್ರಯೋಜನಗಳು

- ಖರ್ಚು ಕಡಿಮೆ, ಅವಶ್ಯ ಇದ್ದರೆ ಫೌಂಡೇಶನ್ ಬೀಜಗಳನ್ನು ಸಹ ಉಪಯೋಗಿಸಬಹುದು.
- ಒಳ್ಳೆಯ ಗುಣಮಟ್ಟದ ಬೀಜಗಳನ್ನು ಎಚ್ಚರಿಕೆಯಿಂದ ಶೇಖರಿಸಬಹುದು / ಆಯ್ಕೆ ಮಾಡಿಕೊಳ್ಳಬಹುದು
- ನೀರಿನಲ್ಲಿ ಹಾಕಿ ಜೊಳ್ಳು ಬೀಜಗಳನ್ನು ತೆಗೆಯಬಹುದು. ಅವಶ್ಯವಿರುವ ಬೀಜಗಳನ್ನು ಶೇಖರಿಸಬಹುದು / ಆಯ್ಕೆ ಮಾಡಿಕೊಳ್ಳಬಹುದು
- ಕಡಿಮೆ ಬೀಜಗಳಿಂದ ಸಹ ಬೀಜ ಉತ್ಪತ್ತಿ ಮಾಡಬಹುದು, ಮತ್ತೆ "ಶ್ರೀ" ಪದ್ಧತಿ ಉಪಯೋಗಿಸಿ ಬೆಳೆಯನ್ನು ಹೆಚ್ಚಿನ ಪ್ರದೇಶಕ್ಕೆ ವಿಸ್ತರಿಸಬಹುದು.

### ನಾಟಿ ಮಾಡುವ ಜಮೀನಿಗೆ ಸಸಿಗಳನ್ನು ತಲುಪಿಸುವುದು

ಎಳೇ ಸಸಿಗಳನ್ನು ನಾಟಿ ಮಾಡುವ ಜಮೀನಿಗೆ ತಲುಪಿಸುವುದು ಒಂದು ಸಮಸ್ಯೆ ಇದನ್ನು ಪರಿಹರಿಸಲು :

- ನಾಟಿಮಾಡುವ ಗದ್ದೆಯ ಹತ್ತಿರ ಸಸಿ ಮಡಿ ಇರಬೇಕು.
- ಪ್ರತಿ ಎಕರೆಗೆ ಅಲ್ಲಿಯೇ ಒಂದು ಮೂಲೆ / ಮಧ್ಯದಲ್ಲಿ 400 ಚದರ ಅಡಿಗಳ ಸಸಿ ಮಡಿ ತಯಾರು ಮಾಡಿಕೊಳ್ಳಬೇಕು.
- ಬಾಳೆ ದಿಂಡು, ಪ್ಲಾಸ್ಟಿಕ್ ಟ್ರೇನಲ್ಲಿ ಸಸಿ ಮಡಿ ಮಾಡಿಕೊಳ್ಳಬಹುದು.
- ಮ್ಯಾಟ್ ಪದ್ಧತಿಯಲ್ಲಿ ಸಸಿಗಳನ್ನು ಬೆಳೆಸಬಹುದು.





### 3.2 ಬೀಜಗಳ ಮೊಳಕೆ ಕಟ್ಟುವುದು, ಬಿತ್ತುವುದು / ಚೆಲ್ಲುವುದು

ಸಸಿ ಬೆಳೆಸುವಲ್ಲಿ ಮೊಳಕೆ ಕಟ್ಟುವುದು ಒಂದು ಪದ್ಧತಿ ಮಾತ್ರ ,ಇದರಲ್ಲಿ ಇತರೇ ಪದ್ಧತಿಗಳು ಸಹ ಇವೆ.

ಭತ್ತದ ಬೀಜವನ್ನು ನೀರಿನಲ್ಲಿ ನೆನೆಸಿ, ಮೊಳಕೆ ಹೊಡೆದ ನಂತರ ಚೆಲ್ಲುವುದಕ್ಕೆ ಮೊಳಕೆ ಕಟ್ಟಿ ಬಿತ್ತುವುದು ಅಥವಾ ಚೆಲ್ಲುವುದು ಎಂದು ಹೇಳುತ್ತಾರೆ.

#### ಮೊಳಕೆ ಕಟ್ಟಿಸುವುದು :

ಭತ್ತದ ಬೀಜವನ್ನು 12 ಗಂಟಗಳ ಕಾಲ ನೀರಿನಲ್ಲಿ ನೆನೆಸಿ. ತದನಂತರ ಗೋಣಿಚೀಲದೊಳಗೆ ಹಾಕಿ ಅಥವಾ ಗೋಣಿಚೀಲಗಳಿಂದ ಮುಚ್ಚಿ 24 ಗಂಟೆಗಳ ಕಾಲ ಇಡಬೇಕು. ಆಗ ಬೀಜ ಮೊಳಕೆಯೊಡೆಯುತ್ತದೆ. ಇದನ್ನೇ ಮೊಳಕೆಯೊಡೆಯುವುದು ಎನ್ನುತ್ತಾರೆ. ಈ ತರಹದ ಬೀಜವನ್ನು ಸಸಿ ಮಡಿಯಲ್ಲಿ ಹರಡಬೇಕು, ಮೊಳಕೆಯೊಡೆದಾಗ ಹರಡದೇ ನಿಧಾನ/ ಆಲಸ್ಯ ಮಾಡಿದಲ್ಲಿ ಮೊಳಕೆ ಬೆಳೆದು, ಬೀಜ ಬೇರೆ ಬೇರೆಯಾಗಿ ಹರಡಲು ಕಷ್ಟವಾಗುತ್ತದೆ.

#### ಬೀಜ ಹರಡುವುದು / ಬಿತ್ತುವುದು :

ಗದ್ದೆಯಲ್ಲಿ ಬಿತ್ತುವ ಬೀಜವನ್ನು ನಾಲ್ಕು ಭಾಗಗಳಾಗಿ ಮಾಡಿಕೊಳ್ಳಬೇಕು. ಒಂದು ಭಾಗದ ನಂತರ ಒಂದಾಗಿ ಈ ಬೀಜವನ್ನು ಗದ್ದೆಯಲ್ಲಿ ನಾಲ್ಕು ಸಾರಿ ಬಿತ್ತಬೇಕು. ಈ ರೀತಿ ಮಾಡುವುದರಿಂದ ಗದ್ದೆಯಲ್ಲಿ ಬೀಜ ಸಮಾನವಾಗಿ ಬೀಳುತ್ತದೆ. ಬೀಜದಿಂದ ಬೀಜದ ಅಂತರ ಬೀಜದಷ್ಟೆ ದೂರ ಇರುವಂತೆ ಬೀಜಗಳನ್ನು ಗದ್ದೆಯಲ್ಲಿ ಬಿತ್ತಬೇಕು. ಸಾಯಂಕಾಲ ಸಮಯದಲ್ಲಿ ಬಿತ್ತನೆ ಮಾಡುವುದು ಒಳ್ಳೆಯದು.

#### ಬೀಜಕ್ಕೆ ಮುಚ್ಚಲಿಕೆ / ಹೊದಿಕೆ :

ಬೀಜದ ಮೇಲೆ ಚೆನ್ನಾಗಿ ಕೊಳೆತ ಸಗಣಿಮಿಶ್ರಿತ ಗೊಬ್ಬರ ಅಥವಾ ಸಣ್ಣ ಮಣ್ಣನ್ನು ಬೀಜ ಕಾಣದಂತೆ ಹರಡಬೇಕು. ಭತ್ತದ ಹುಲ್ಲನ್ನು ತೆಳುವಾಗಿ ಹರಡಬಹುದು. ಇದರಿಂದ ಬೀಜ ಬಿಸಿಲು, ಮಳೆಗೆ ನೇರವಾಗಿ ಸಿಗದೆ ಇರುತ್ತದೆ. ಪಕ್ಷಿಗಳು, ಇರುವೆ ತಿನ್ನದ ಹಾಗೆ ಇರುತ್ತದೆ. ಹರಡಿದ ಹುಲ್ಲನ್ನು ಮೊಳಕೆ ಬಂದ ನಂತರ ತೆಗೆಯಬೇಕು.

#### ನೀರು ಹಾಕುವುದು :

ಅವಶ್ಯಕತೆಗೆ ತಕ್ಕಂತೆ ಸಸಿಮಡಿಗಳಿಗೆ ಬೆಳಗ್ಗೆ ಮತ್ತು ಸಾಯಂಕಾಲ ನೀರನ್ನು ಚಿಮಕಿಸುವುದು ಅಥವಾ ನರ್ಸರಿ ಬೆಳೆಸುವುದಕ್ಕೆ ಉಪಯೋಗಿಸುವ "ರೋಜ್‌ಕ್ಯಾನ್" ಬಳಸುವುದು, ಬಿಂದಿಗೆಯನ್ನು ಬಳಸುವಾಗ ಕೈ ಅಡ್ಡ ಇಟ್ಟು ನೀರನ್ನು ಸಿಂಪಡಿಸಬೇಕು. ಸಸಿ ಮಡಿ ಸುತ್ತಲೂ ಇರುವ ಕಾಲುವೆಗಳಲ್ಲಿ ಸಹ ನೀರು ಹರಿಸಿ ಸಸಿಗೆ ನೀರು ಸಿಗುವಂತೆ ಮಾಡಬಹುದು.

#### ಸಾಮೂಹಿಕ ಸಸಿ ಮಡಿಗಳು

ಮಳೆ ಬಿದ್ದಾಗ ನಾಟಿಮಾಡಲು ಸಸಿಗಳು ಸಿಗುವಂತೆ ಮಾಡುವುದು ಬಹಳ ಮುಖ್ಯವಾದ ಕೆಲಸ. ಕಡಿಮೆ ಬೀಜ, 8–15 ದಿನಗಳಲ್ಲಿ ಸಸಿ ನಾಟಿ ಮಾಡುವುದರಿಂದ, ಸಾಮೂಹಿಕ ಸಸಿ ಮಡಿ ಮಾಡುವುದು ಉತ್ತಮ. ಪ್ರತಿ 2–3 ದಿನದ ಅಂತರದಲ್ಲಿ ಸಸಿ ಮಡಿ ಮಾಡುವುದರಿಂದ ವಿವಿಧ ಸಮಯದಲ್ಲಿ ನಾಟಿಮಾಡುವುದಕ್ಕೆ ಸಸಿ ಸಿಗುವಂತಾಗುವುದು. ಇದರಿಂದ ಸ್ವಲ್ಪ ನೀರು ಹಾಳಗಬಹುದು ಆದರೆ ಸಕಾಲಕ್ಕೆ ನಾಟಿ ಮಾಡಲು ಸಹಕಾರಿಯಾಗಿರುತ್ತದೆ.



ಕವಲು ಒಡೆದ ಸಸಿಗಳು








## “ಮ್ಯಾಟ್” ಪದ್ಧತಿಯಲ್ಲಿ ಸಸಿ/ಪೈರು ಬೆಳೆಸುವುದು

ಪಾಲಿಥಿನ್ ಕಾಗದ ಅಥವಾ ಖಾಲಿ ಗೊಬ್ಬರದ ಚೀಲಗಳ ಮೇಲೆ ಸಸಿ ಮಡಿ ತಯಾರು ಮಾಡಿಕೊಳ್ಳಬಹುದು. ಇದಕ್ಕೆ ಒಂದು ಮೀಟರ್ ಉದ್ದ, ಆರು ಮೀಟರ್ ಅಗಲ ಇರುವ ನಾಲ್ಕು ಮೂಲೆಗಳ ಕಬ್ಬಿಣ ಅಥವಾ ಮರದ ಚೌಕಟ್ಟು ತೆಗೆದುಕೊಳ್ಳಬೇಕು. ಒಂದೊಂದು ಮೂಲೆಯ ಒಳಗಿನ ಸುತ್ತಳತೆ 0.125 ಚದರ ಮೀಟರ್ ಇರಬೇಕು. ಇದರ ಜೊತೆಗೆ 4 ಸೆಂಟಿಮೀಟರ್ ದಪ್ಪಕ್ಕೆ ಇರುವಂತೆ ಮಣ್ಣು, ಒಳ್ಳೆಯ ಮಿಶ್ರಿತ ಕೊಟ್ಟಿಗೆಗೊಬ್ಬರ ಬೆರಸಿ ಸಸಿಮಡಿ ತಯಾರು ಮಾಡಿಕೊಳ್ಳಬೇಕು. ಮಡಿಯಲ್ಲಿ ಬೀಜ ಚೆಲ್ಲಿ ಮಣ್ಣಿನಿಂದ ಮುಚ್ಚಬೇಕು. ಸಸಿ ಮಡಿಗೆ ನೀರು ಬಿಟ್ಟ ನಂತರ ಚೌಕಟ್ಟು ತೆಗೆದು ಹಾಕಿ ಅದನ್ನು ಮತ್ತೆ ಉಪಯೋಗಿಸಬಹುದು. ಮೊದಲ ಐದು ದಿನ ಕ್ಯಾನ್ ಬಳಸಿ ಅವಶ್ಯಕತೆಗೆ ಅನುಗುಣವಾಗಿ ದಿನಕ್ಕೆ 2–3 ಸಾರಿ ನೀರಿನಿಂದ ನೆನಸಬೇಕು. ಅದಾದ ನಂತರ ಸಸಿ ಮಡಿಗಳ ಮಧ್ಯೆ ಕಾಲುವೆಗಳ ಮುಖಾಂತರ ನೀರು ಬಿಡಬಹುದು. ಪಾಲಿಥಿನ್ ಕಾಗದದಿಂದ ಅಚ್ಚು ಮಾದರಿಯ ಸಸಿ ಮಡಿಯನ್ನು ಮೇಲೆಕ್ಕೆ ಎತ್ತಿ ಗದ್ದೆಗೆ ತೆಗೆದುಕೊಂಡು ಹೋಗಬಹುದು.





# ಪಿಲ್ಲೋಕಾರ್ನು, ಭತ್ತದ ಇಳುವರಿ



**ಶ್ರೀ** ಪದ್ಧತಿಯಲ್ಲಿ ನಾಟಿ ಮಾಡಿದ 4–5 ವಾರದವರೆಗೆ ಪೈರು ನೋಡಲು ಸರಿಯಾಗಿ ಕಾಣುವುದಿಲ್ಲ. ಸಸಿ ಚಿಕ್ಕದಾಗಿ. ದೂರ ದೂರ ಇರುತ್ತದೆ. ನೀರು ಸಹ ಇಲ್ಲದೆ ಭೂಮಿಯು  ಒಣಗಿರುತ್ತದೆ. ಆದರೆ ಈ ಸಮಯದಲ್ಲಿ ಸಸಿಗಳು ಕವಲು ಬಿಡಲು ಸಿದ್ಧವಾಗಿರುತ್ತವೆ. ಎರಡನೇ ತಿಂಗಳು ಕವಲು ಬೆಳೆಯಲು ಪ್ರಾರಂಭವಾಗುತ್ತದೆ. ಮೂರನೇ ತಿಂಗಳು ಕವಲುಗಳ ಸಂಖ್ಯೆ ಅಧಿಕವಾಗುತ್ತದೆ. ಈ ರೀತಿ ಏಕೆ ಆಗುತ್ತದೆ ಎಂದು ಅರ್ಥ ಮಾಡಿಕೊಳ್ಳಲು "ಪಿಲ್ಲೋಕಾರ್ನು" ಬಗ್ಗೆ ತಿಳಿದು ಕೊಳ್ಳಬೇಕು.

"ಪಿಲೋಕಾರ್ನು" ಎನ್ನುವುದು ಒಂದು ಎಲೆ, ಬೇರು ಬಿಡಲು ತೆಗೆದುಕೊಳ್ಳುವ ಸಮಯ, ಮುಖ್ಯವಾಗಿ ವಾತಾವರಣದಲ್ಲಿನ ಉಷ್ಣಾಂಶದ ಆಧಾರದ ಮೇಲೆ ಹಗಲಿನ ಸಮಯ, ಗಾಳಿಯಲ್ಲಿನ ತೇವಾಂಶ, ನೆಲದಲ್ಲಿನ ತೇವ, ನೆಲದ ಪೌಷ್ಠಿಕಾಂಶ, ಗಾಳಿ–ಬೆಳಕು ಬೀಳುವುದರ ಮೇಲೆ ಪಿಲ್ಲೋಕಾರ್ನುನ ಹಂತಗಳು ಅವಲಂಬಿತವಾಗಿವೆ. ಎಲ್ಲಾ ಪರಿಸ್ಥಿತಿಗಳೂ ಅನುಕೂಲಕರವಾಗಿದ್ದರೆ 5 ದಿನಗಳಲ್ಲೇ ಒಂದು ಪಿಲ್ಲೋಕಾರ್ನು ಹಂತ ಮುಗಿಯುತ್ತದೆ. ಇಲ್ಲದ್ದಿದರೆ 6–7 ದಿನಗಳು ಅಥವಾ ಇನ್ನೂ ಹೆಚ್ಚಿನ ದಿನಗಳು ಹಿಡಿಯುತ್ತವೆ. ಭತ್ತದ ಸಸಿ ಹಂತ ಪೂರ್ತಿಮಾಡಿ ವಡೆ (ಮೊಗ್ಗು) ಬಿಡುವುದರೊಳಗೆ 12 ಪಿಲ್ಲೋಕಾರ್ನು ಹಂತಗಳನ್ನು ಪೂರ್ತಿ ಮಾಡಿಕೊಂಡರೇ ಒಳ್ಳೆಯದು. ಹೊಸ ಮರಿಗಳು ಎರಡು ಪಿಲ್ಲೋಕಾರ್ನು ಹಂತ ಪೂರ್ತಿ ಮಾಡಿದರೆ ಅವು ಸಹ ಮರಿ ಹೊಡೆಯಲು ಪ್ರಾರಂಭಿಸುತ್ತವೆ. ಅಂದರೆ, ಹೊಸ ಮರಿಗಳ ಸಂಖ್ಯೆ ವೇಗವಾಗಿ ಅಧಿಕವಾಗುತ್ತದೆ.







ಬೀಜ ಮೊಳಕೆಯೊಡೆಯುವುದು ಮೊದಲನೇ ಪಿಲ್ಲೋಕಾರ್ನು ಹಂತ ಅಂದುಕೊಂಡರೆ, ಎರಡನೇ ಮೂರನೇ ಪಿಲ್ಲೋಕಾರ್ನು ಹಂತದಲ್ಲಿ ನಾಟಿ ಮಾಡುವುದು ಒಳ್ಳೆಯದು ಇದರಿಂದ, 4ನೇ ಪಿಲ್ಲೋಕಾರ್ನು ಹಂತಗಳಲ್ಲಿ ವೇಗವಾಗಿ ಬೆಳವಣಿಗೆಯಾಗಲು ಸಮಸ್ಯೆ ಇರುವುದಿಲ್ಲ. ಪಿಲ್ಲೋಕಾರ್ನು ಹಂತಗಳು ಹಾಗೂ ಮರಿಗಳ  ಸಂಖ್ಯೆ ಈ ಕೆಳಗಿನಂತೆ ಇರುತ್ತದೆ. ಶ್ರೀ ಪದ್ಧತಿಯಲ್ಲಿ ನಡೆಯುವುದೇ ಇದು.

| | ಪಿಲ್ಲೋಕಾರ್ನು | | | | | | | | | | | |
|---|---|---|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 | 10 | 11 | 12 |
| **ಹೊಸ ಕವಲುಗಳು** | 1 | 0 | 0 | 1 | 1 | 2 | 3 | 5 | 8 | 12 | 20 | 31 |
| **ಒಟ್ಟು ಕವಲುಗಳು** | 1 | 1 | 1 | 2 | 3 | 5 | 8 | 13 | 21 | 33 | 53 | 84 |



ಜಮೀನಿನಲ್ಲಿ ಮಾರ್ಕಿಂಗ್ ಮಾಡುತ್ತಿರುವುದು

# 4. ಮುಖ್ಯ ಭೂಮಿ ತಯಾರಿಕೆ

ಹೊಲ / ಜಮೀನು ಊಳುವುದು ಮಣ್ಣಿನ ಸಡಲೀಕರಣ ಕ್ರಿಯೆಗಳಿಗೆ ಸಂಬಂದಪಟ್ಟಂತೆ ಮಾಮೂಲಿ (ಸಾಂಪ್ರದಾಯಿಕ) ಪದ್ಧತಿಗೂ ಮತ್ತು ಶ್ರೀ ಪದ್ಧತಿಗೂ ವ್ಯತ್ಯಾಸವೇನು ಇರುವುದಿಲ್ಲ. ಆದರೆ, ಹೊಲವನ್ನು ಮೊದಲು ಒಣ ಉಳುಮೆಮಾಡಿ, ನಂತರ ನೀರು ಬಿಟ್ಟು ಕೆಸರು ಗದ್ದೆ ಮಾಡಿದರೆ ಒಳ್ಳೆಯ ಫಲಿತಾಂಶಗಳನ್ನು ನೋಡಬಹುದು. ಕೆಸರು ಗದ್ದೆ ಮಾಡುವ ಯಂತ್ರ / ಪೆಡ್ಲರ್ ಉಪಯೋಗಿಸದಿದ್ದರೆ ಒಳ್ಳೆಯದು. ಗದ್ದೆ ಸಮತಟ್ಟಾಗಿ ಇರಬೇಕು. ನಾಟಿ ಮಾಡುವಾಗ ನೀರು ಇರಬಾರದು. ಮುಖ್ಯವಾಗಿ ಮಳೆ ಆಶ್ರಿತ ಜಮೀನಿನಲ್ಲಿ ಬೇಸಿಗೆ ಕಾಲದಲ್ಲಿ ಉಳುಮೆಮಾಡಿ ಭೂಮಿ ತಯಾರು ಮಾಡಿಕೊಂಡು ನೀರು ಬಿಟ್ಟು ನಾಟಿ ಮಾಡುವುದರಿಂದ ವೀಡರ್‌ನ್ನು ಸುಲಭವಾಗಿ ಬಳಸಬಹುದು. ಭೂಮಿಯ ಮೇಲ್ಪದರಲ್ಲೇ ಉಳುಮೆ ಮಾಡಿ ಗದ್ದೆ ತಯಾರು ಮಾಡುವುದರಿಂದ ವೀಡರ್ ಉಪಯೋಗಿಸಲು ತೊಂದರೆ ಆಗುವುದಿಲ್ಲ ಮತ್ತು ವೀಡರ್ ಬಳಸುವವರಿಗೆ ಕಷ್ಟ ಅನಿಸುವುದಿಲ್ಲ.

ಗದ್ದೆಗಳು ಚಿಕ್ಕದಾಗಿ, ಸಮತಟ್ಟಾಗಿದ್ದರೆ ನೀರು ನಿರ್ವಹಣೆಗೆ ಅನುಕೂಲಕರವಾಗಿರುತ್ತದೆ. ನೀರು ಬಿಡಲು ಮತ್ತು ಹೊರತೆಗೆಯಲು ಅವಶ್ಯವಿರುವ ಕಾಲುವೆಗಳನ್ನು ತಯಾರಾಗಿ ಇಟ್ಟುಕೊಳ್ಳಬೇಕು.

## 4.1 ಹೆಚ್ಚು ಅಂತರವಿಟ್ಟು ನಾಟಿ ಮಾಡುವುದು

ಶ್ರೀ ಪದ್ಧತಿಯಲ್ಲಿ ಹೆಚ್ಚು ಅಂತರವಿಟ್ಟು ನಾಟಿ ಮಾಡುವುದು ಬಹಳ ಮುಖ್ಯ. ಸಾಲು ಸಾಲುಗಳ ಮಧ್ಯೆ ಸಾಲುಗಳಲ್ಲಿ ಸಸಿಯಿಂದ ಸಸಿಗೆ 10 ಅಂಗುಲ ಅಂತರ ಇರಬೇಕು. (25 x 25 ಸೆಂ.ಮೀ.) ಈ ರೀತಿ ಶ್ರೀ ಪದ್ಧತಿಯಲ್ಲಿ ಚದರ ಮೀಟರ್‌ಗೆ 16 ಸಸಿಗಳಿರುತ್ತವೆ. ಸಸಿ ಸತ್ತು ಹೋಗುತ್ತವೆ ಎಂಬ ಅನುಮಾನವಿದ್ದಲ್ಲಿ ಒಂದೊಂದು ಕಡೇ ಎರಡೆರಡು ಸಸಿ ನಾಟಿಮಾಡಬಹುದು. ಸಾಂಪ್ರದಾಯ ಪದ್ಧತಿಯಲ್ಲಿ ಚದರ ಮೀಟರಗೆ 33–40 ಗೊಂಚಲುವರೆಗೆ ಹಾಕುತ್ತಾರೆ! ಒಂದೊಂದು ಗೊಂಚಲಿಗೆ 4–5 ಸಸಿಗಳವರಗೆ ನಾಟಿ ಮಾಡುತ್ತಾರೆ.



ಮಾರ್ಕರ್

### ಎಷ್ಟು ಅಂತರ ನಾಟಿಮಾಡಬೇಕು

ಸಸಿಯಿಂದ ಸಸಿಗೆ ಹೆಚ್ಚು ಅಂತರವಿಟ್ಟು ನಾಟಿಮಾಡಿದರೆ ಸಸಿ ಬಲವಾಗಿ ಬೆಳೆದು ಇಳುವರಿ ಹೆಚ್ಚುತ್ತದೆ ಅಂದುಕೊಳ್ಳೋಣ. ಶ್ರೀ ಪದ್ಧತಿಯಲ್ಲಿ 25 X 25 ಸೆಂ.ಮೀ. ದೂರದಲ್ಲಿ ನಾಟಿಮಾಡಬೇಕು. ಅದರೆ 50 X 50 ಸೆಂ.ಮಿ, 1 X 1 ಮೀಟರ್ ಅಂತರದಲ್ಲಿ ನಾಟಿ ಮಾಡಿ ಪ್ರಯೋಗ ಮಾಡಿ ಒಳ್ಳೆಯ ಫಲಿತಾಂಶ ಪಡೆದವರೂ ಇದ್ದಾರೆ.

## 4.2 ಮಾರ್ಕರ್ ಉಪಯೋಗಿಸಿ

10 x 10 ಅಂಗುಲ ದೂರದಲ್ಲಿ ನಾಟಿ ಮಾಡಲು ಆನೇಕ ವಿಧಾನಗಳು ಇವೆ. ಒಂದು ಹಗ್ಗಕ್ಕೆ 10 ಅಂಗುಲ ದೂರದಲ್ಲಿ ಕಡ್ಡಿಯನ್ನು ಕಟ್ಟಿ ಒಂದು ಸಾಲು ಆದಮೇಲೆ ಇನ್ನೊಂದು ಸಾಲು ನಾಟಿಮಾಡಬಹುದು. ಈ ರೀತಿ ಇಲ್ಲದೆ 10 x 10 ಅಂಗುಲ ದೂರದಲ್ಲಿ ನಾಟಿಮಾಡುವುದಕ್ಕೆ "ಮಾರ್ಕರ್" ಸಿಗುತ್ತದೆ. ತಯಾರು ಮಾಡಿರುವ ಗದ್ದೆಯಲ್ಲಿ ಈ ಮಾರ್ಕರ್ ಇಟ್ಟು ಅಡ್ಡ – ಉದ್ದ ಗೆರೆ ಹಾಕಿಕೊಳ್ಳಬಹುದು. ಈ ರೀತಿ ಅಡ್ಡ–ಉದ್ದ ಗೆರೆ ಸಂಧಿಸುವ ಜಾಗದಲ್ಲಿ ಭತ್ತದ ಸಸಿ ನಾಟಿ ಮಾಡಬಹುದು.

ಗುರುತು ಹಾಕಲು ಕಬ್ಬಿಣದಿಂದ ಮಾಡಿದ ಮಾರ್ಕರ್ ಅಥವಾ ಬಿದಿರು ಕಡ್ಡಿಯನ್ನು ಉಪಯೋಗಿಸಿ ಮಾರ್ಕರ್‌ಗಳನ್ನು ಮಾಡಬಹುದು.

ಸಾಲುಗಳು ನೇರವಾಗಿ ಇರಲು ಗದ್ದೆಯಲ್ಲಿ ತೆಂಗಿನನಾರು / ಪ್ಲಾಸ್ಟಿಕ್ ದಾರ ಕಟ್ಟಿ ಅದೇ ದಿಕ್ಕಿನಲ್ಲಿ ಮಾರ್ಕರನ್ನು ಎಳೆಯಬೇಕು. ಒಂದು ಸಾಲು ಅದನಂತರ 12–13 ಅಂಗುಲ ಅಂತರ ಜಾಗ (ದಾರಿ) ಬಿಟ್ಟು, ಇನ್ನೊಂದು ಸಾಲನ್ನು ಹಾಕಬೇಕು.

ಮಾರ್ಕರ್‌ನ್ನು ಬೇಗನೆ ವೇಗವಾಗಿ ಎಳೆಯಬೇಕು. ನಿಧಾನವಾಗಿ ಎಳೆದರೆ ಚಕ್ರ ತಿರುಗದೆ ಮಣ್ಣಿನ ಮೇಲ್ಭಾಗದಲ್ಲಿ ಎಳೆದುಕೊಂಡು ಬರುತ್ತದೆ.

### 4.3 ದಾರಿಗಳನ್ನು ಬಿಡುವುದು.

ಪ್ರತಿ ಎರಡು ಮೀಟರಿಗೆ ಭತ್ತದಲ್ಲಿ ದಾರಿಯನ್ನು ಬಿಡಬೇಕು ಎಂದು ಹೇಳುತ್ತಾರೆ. ರೈತರು ಸಹಾ ಈ ಪದ್ಧತಿಯನ್ನು ಅನುಮೋದಿಸಿರುತ್ತಾರೆ. ಆದರೆ, ಮುಂದೆ ಗದ್ದೆಯಲ್ಲಿ ನಾಟಿಮಾಡಿದ ನಂತರ ಎರಡು ಮೀಟರಿಗೆ ಒಂದು ಹಗ್ಗ ಇಟ್ಟು ಅದರ ಎರಡು ಪಕ್ಕದಲ್ಲಿ ಇರುವ ಸಸಿಗಳನ್ನು ಕಿತ್ತು ಮಧ್ಯದಲ್ಲಿ ನಾಟಿಮಾಡುತ್ತಾರೆ. ಶ್ರೀ ಪದ್ಧತಿಯಲ್ಲಿ ಮಾರ್ಕರ್‌ನಿಂದ ಗುರುತ್ತುಗಳನ್ನು ಹಾಕುವಾಗ ಪ್ರತಿ 8 ಸಾಲಿಗೆ, ಅಂದರೆ ಮಾರ್ಕರ್‌ನಿಂದ ಒಂದು ಸಾರಿ ಉದ್ದವಾಗಿ ಗೆರೆ ಹಾಕಿದ ನಂತರ 12–13 ಅಂಗುಲ ದಾರಿ ಬಿಟ್ಟು ಮತ್ತೇ ಮಾರ್ಕರ್ ಸಹಾಯದಿಂದ ಗೆರೆ ಎಳೆಯಬೇಕು. ಈ ದಾರಿಗಳ ಮಧ್ಯೆ ನಡೆಯುತ್ತ ನಾಟಿ ಮಾಡಲು ಸಹಾಯಕಾರಿಯಾಗುತ್ತದೆ.

ಭತ್ತದ ಹೊಲದಲ್ಲಿ (ಸಸಿಗಳಿಗೆ) ಗಾಳಿ ಚೆನ್ನಾಗಿ ಸಿಗುವುದರಿಂದ ಕೀಟ, ರೋಗಗಳ ವೃದ್ದಿಯನ್ನು ಹತೋಟಿಯಲ್ಲಿ ಇಡಲು ಈ ದಾರಿಗಳು ಉಪಯೋಗವಾಗುತ್ತವೆ. ಬದುಗಳ ಉದ್ದಕ್ಕು, ದಾರಿಗಳ ಉದ್ದಕ್ಕು, ಸಸಿಗಳು ಆರೋಗ್ಯಕರವಾಗಿ ಬೆಳೆಯುವುದನ್ನು ನೋಡುತ್ತೇವೆ. ಅದೇ ರೀತಿ ಈ ದಾರಿಗಳ ಉದ್ದಕ್ಕೂ ಸಸಿಗಳು ಸಹಾ ಆರೋಗ್ಯಕರವಾಗಿ ಬೆಳೆಯುತ್ತವೆ. ಇತರೇ ಅಂತರಕೃಷಿ ಕಾರ್ಯಗಳಿಗೆ, ಪರಿಶೀಲನೆಗಳಿಗೂ ಸಹಾ ಈ ದಾರಿಗಳು ಉಪಯೋಗವಾಗುತ್ತವೆ. ಆದರೆ ಕೆಲವರು ಈ ದಾರಿಗಳು ಇಲ್ಲದೇನೆ ನಾಟಿ ಮಾಡುತ್ತಾರೆ.

ಗದ್ದೆಗಳಿಗೆ ಬದು ಕಡೆಯುವುದು, ಸಮತಲ ಮಾಡುವುದು, ಮಾರ್ಕರ್‌ನಿಂದ ನಾಟಿ ಮಾಡಲು ಗುರುತುಗಳನ್ನು ಹಾಕುವುದು ಮುಂತಾದವುಗಳನ್ನು ನಾಟಿಮಾಡುವ ಮುನ್ನ ಪೂರ್ತಿಮಾಡಿ ಇರಬೇಕು.

#### ವಿವಿಧ ಮಾರ್ಕರ್‌ಗಳು

ಹಗ್ಗ, ಕಬ್ಬಿಣ, ಕಡ್ಡಿಗಳನ್ನು ಬಳಸಿ ರೈತರು ವಿವಿಧ ಮಾರ್ಕರ್‌ಗಳನ್ನು ಮಾಡುತ್ತಾರೆ. 4 ಸಾಲಿನಿಂದ 16 ಸಾಲುಗಳವರಗೆ ಹಾಕುವ ಸೂಪರ್ ಮಾರ್ಕರ್‌ಗಳನ್ನು ತಯಾರು ಮಾಡಿರುತ್ತಾರೆ. ಬಿದಿರು ಕಡ್ಡಿಗಳನ್ನು ಅಧಾರವಾಗಿ ಇಟ್ಟು ರೋಲರ್ ಮಾರ್ಕರ್‌ಗಳನ್ನು ತಯಾರು ಮಾಡಿದ್ದು ರೈತರೇ. ರೋಲರ್ ಮಾರ್ಕರ್‌ಗಳಿಂದ ಉದ್ದ, ಅಡ್ಡ ಗೆರೆಗಳನ್ನು ಒಂದೇ ಸಾರಿ ಹಾಕುವುದರಿಂದ ಸಸಿ ನಾಟಲು ಗುರುತುಗಳನ್ನು ಏರ್ಪಾಡು ಮಾಡಬಹುದು.



ರೋಲರ್ ಮಾರ್ಕರ್



ಕೌಂಡಿನ್ಯ ಮಾರ್ಕರ್



ಮರದ ಮಾರ್ಕರ್

#### ಮಾರ್ಕರ್‌ನಲ್ಲಿ ಇರುವ ಸಮಸ್ಯೆಗಳು

- ❖ ಆಳವಾಗಿ ಚಕ್ರ ತಿರುಗದೆ ಗೆರೆ ಬೀಳದೆ ಗದ್ದೆಯಲ್ಲಿ ಗೆರೆ ಎಳೆದ ಹಾಗೆ ಇರುತ್ತದೆ.
- ❖ ಯಾವುದಾದರು ಕಲ್ಲಾಗಲಿ/ಕಟ್ಟಿಗೆ/ಮರದ ಕೊಂಬೆ ಮಾರ್ಕರಿಗೆ ಅಡ್ಡ ಬಿದ್ದಾಗ ಮಾರ್ಕರ್ ಮೇಲಿದು ಸರಿಯಾಗಿ ಗುರುತುಗಳು ಬೀಳದೆ ಇರಬಹುದು
- ❖ ಹಸಿರೆಲೆ ಬೆಳೆ ಬೆಳೆದು, ಕೆಸರು ಗದ್ದೆ ಮಾಡಿದ ಮೇಲೆ ಭೂಮಿಯಲ್ಲಿ ಮಾರ್ಕರ್‌ನಿಂದ ಗೆರೆ ಹಾಕುವುದು ಕಷ್ಟಕರ



ಮಾರ್ಕಿಂಗ್ ಮಾಡಿರುವ ಸ್ಥಳಕ್ಕೆ ಸಸಿ ಮಡಿಯನ್ನು ವರ್ಗಾಯಿಸುತ್ತಿರುವುದು.

# 5. ನಾಟಿ ಮಾಡುವುದು

ಎಳೆ ಸಸಿ (8–12 ದಿನಗಳು) ಒಂದೊಂದು ಸಸಿ ನಾಟಿಮಾಡುವುದು ಶ್ರೀ ಪದ್ಧತಿಯ ವೈಶಿಷ್ಟ್ಯತೆ. ಗದ್ದೆಯಲ್ಲಿ ಸಸಿಯನ್ನು ಜೋಪಾನದಿಂದ ಬೆಳೆಸುವುದಲ್ಲದೆ ನಾಟಿಮಾಡುವಾಗ ಸಹಾ ಬಹಳ ಎಚ್ಚರಿಕೆ ವಹಿಸುವುದು ಮುಖ್ಯ. ಸಸಿಗೆ ಯಾವುದೇ ತರಹದ ಆಘಾತ ತಗಲಕೂಡದು, ಸಸಿ ಮಡಿಯಿಂದ ತೆಗೆದು ಗದ್ದೆಯಲ್ಲಿ ನಾಟಿಮಾಡುವಾಗ ಯಾವುದೇ ತರಹದ ಹಾನಿ ಆಗಬಾರದು. ಈ ಕೆಲಸ ಮಾಡುವ ಕುಟುಂಬದ ಸದಸ್ಯರಿಗೆ, ಕೂಲಿಯಾಳುಗಳಿಗೆ ಈ ವಿಷಯದ ಬಗ್ಗೆ ತಿಳುವಳಿಕೆ ಕೊಡಬೇಕು.

ಮಾಮೂಲಿ (ಸಾಂಪ್ರದಾಯಿಕ) ಪದ್ಧತಿಯಲ್ಲಿ ಭತ್ತದ ಸಸಿಯನ್ನು ಹಿಡಿದು ಕೀಳುತ್ತಾರೆ. ಇದನ್ನು ಸಸಿ ಕೀಳುವುದು ಎಂದು ಹೇಳುತ್ತಾರೆ. ಶ್ರೀ ಪದ್ಧತಿಯಲ್ಲಿ ಸಸಿ ಬಹಳ ಚಿಕ್ಕದಾಗಿ ಇರುತ್ತದೆ. ಆದ್ದರಿಂದ ಕಬ್ಬಿಣದಿಂದ ಮಾಡಿದ ದಪ್ಪವಾದ ರೇಕನ್ನು ಸಸಿಮಡಿಯ ಕೆಳ ಭಾಗಕ್ಕೆ (3–4 ಅಂಗುಲ ಕೆಳಗಿನಿಂದ) ಹಾಕಿ ಸಸಿಯನ್ನು ಮಣ್ಣಿನೊಂದಿಗೆ ಮೇಲಕ್ಕೆ ತೆಗೆಯಬೇಕು. ಅಂದರೆ ಕಬ್ಬಿಣದ ರೇಕಿನ ಮೇಲಕ್ಕೆ ಸಸಿ ಮತ್ತು ಮಣ್ಣು ಬರುತ್ತದೆ. ಇದನ್ನು ತಟ್ಟೆ / ಬುಟ್ಟಿ ಅಥವಾ ಕಬ್ಬಿಣದ ಹಲಗೆಗಳ ಮುಖಾಂತರ ನಾಟಿ ಮಾಡುವ ಗದ್ದೆಗೆ ತೆಗೆದುಕೊಂಡು ಹೋಗಬೇಕು. ಸಸಿಕಿತ್ತ ತಕ್ಷಣ ಸಾಧ್ಯವಾದಷ್ಟು ಬೇಗ (ಸಾಧ್ಯವಾದರೆ ಅರ್ಧಗಂಟೆಯೊಳಗೆ) ನಾಟಿಮಾಡಿದರೇ ಸಸಿ ಹಾನಿ ಆಗದಂತೆ ಇರುತ್ತದೆ.

ಬಾಳೇದಿಂಡು, ಪ್ಲಾಸ್ಟಿಕ್ ಟ್ರೇನಲ್ಲಿ ಸಸಿ ಬೆಳೆಸಿದ್ದಾಗ ಅವುಗಳನ್ನು ನೇರವಾಗಿ ನಾಟಿಮಾಡುವ ಗದ್ದೆಗಳಿಗೆ ಸುಲಭವಾಗಿ ತೆಗೆದುಕೊಂಡು ಹೋಗಬಹುದು.

ಮ್ಯಾಟ್ ಪದ್ಧತಿಯಲ್ಲಿ ಸಸಿ ಬೆಳೆಸಿದ್ದಾಗ ಅವು ಹೆಚ್ಚು ಸಣ್ಣ ಕುಂಡ ರೂಪದಲ್ಲಿ ಇರುವುದರಿಂದ ನಾಟಿ ಮಾಡುವ ಸ್ಥಳಕ್ಕೆ ವರ್ಗಾಹಿಸುವುದು ಸಹ ಸುಲಭವಾಗುತ್ತದೆ.



ಸಸಿ ಮಡಿಗಳನ್ನು ಎತ್ತಲು ಟ್ರೇಗಳನ್ನು ಬಳಸುತ್ತಿರುವುದು.

ನಾಟಿ ಮಾಡುವಾಗ ವಾತಾವರಣದಲ್ಲಿ ಪ್ರಶಾಂತತೆ ಇರುವುದನ್ನು ಗಮನಿಸುವುದು ಬಹು ಮುಖ್ಯ. ಬಹಳ ಶ್ರದ್ಧೆ, ಗಮನವಿಟ್ಟು ನಾಟಿ ಮಾಡಬೇಕು. ಕೋಪ ಪಡುವುದು, ಕೂಗಾಡುವುದು, ಜಗಳವಾಡುವುದು, ಗಲಾಟೆ ಗದ್ದಲಗಳಿದ್ದರೆ ನಾಟಿ ಮಾಡುವುದರಲ್ಲಿ ಏನಾದರೂ ತಪ್ಪುಗಳು ನಡೆಯುವ ಸಾಧ್ಯತೆಗಳಿರುತ್ತದೆ.

## 5.1 ನಾಟಿ ಪದ್ಧತಿ

ಮಾಮೂಲಿ ಪದ್ಧತಿಯಲ್ಲಿ ಭತ್ತದ ಸಸಿಯನ್ನು ತೋರು ಬೆರಳು, ಮಧ್ಯ ಬೆರಳನ್ನು ಉಪಯೋಗಿಸಿ ಕೆಸರಲ್ಲಿ ನಾಟುತ್ತಾರೆ, ಆಗ ಸಸಿ ಬೇರುಗಳು "u" ಅಕ್ಷರ ರೂಪದಲ್ಲಿ ತಿರುಗುತ್ತವೆ. ಅಂದರೆ ಬೇರುಗಳು ಆಕಾಶದಕಡೆ ನೋಡುತ್ತಿರುತ್ತವೆ. ಇದ್ದರಿಂದ ಸಸಿಯ ಬೇರು ಇನ್ನೂ ಕೆಳಗೆ,



ಹೋಗಿ, ಸಸಿ ನಿಂತು ಕೊಳ್ಳಲು ಬಹಳ ಸಮಯ ಬೇಕಾಗುತ್ತದೆ. ಆದರೆ, ಶ್ರೀ ಪದ್ಧತಿಯಲ್ಲಿ ಭತ್ತದ ಸಸಿಯನ್ನು ಮೇಲ್ಮೆಲೆ, ಬೇರಗಳು "ಐ" ಅಕ್ಷರ ರೂಪದಲ್ಲಿ ಇರುವಂತೆ ನಾಟಿ ಮಾಡಬೇಕು. ಮಾರ್ಕರ್‌ನಿಂದ ಉದ್ದ ಅಡ್ಡ ಗೆರೆ ಸೇರುವ ಜಾಗದಲ್ಲಿ ಒಂದು ಅಂಗುಲ ಮೇಲೆ ಸಸಿಯನ್ನು ಇಟ್ಟು ತೋರು ಬೆರಳನಿಂದ ಮೆತ್ತಗೆ ಎಳೆದು ಒಳಗೆ ಬಿಡಬೇಕು. ಹೆಬ್ಬೆರಳು ತೋರು ಬೆರಳುವಿನಿಂದ ಒಂದೊಂದು ಸಸಿಯನ್ನು ಮಣ್ಣು, ಬೀಜದೊಂದಿಗೆ ಬೇರ್ಪಡಿಸಿ ಎಚ್ಚರಿಕೆಯಿಂದ ನಾಟಿ ಮಾಡಬೇಕು. ಈ ರೀತಿಮಾಡುವುದರಿಂದ ಸಸಿ ಬೇಗನೆ ನಿಂತು ಆರೋಗ್ಯಕರವಾಗಿ ಬೆಳೆಯುತ್ತದೆ. ಸಸಿ ನಾಟಿಮಾಡಿದ ದಿನವಾಗಲಿ, ಮರುದಿನವಾಗಲಿ ತೆಳುವಾಗಿ ನೀರು ಬಿಡಬೇಕು.

ಶ್ರೀ ಪದ್ಧತಿಯಲ್ಲಿ ನಾಟಿ ಮಾಡಲು ಒಂದು ಎಕರೆಗೆ 10–15 ಮಂದಿ ಕೂಲಿಯಾಳುಗಳು ಬೇಕಾಗಬಹುದು. ಅನುಭವವಿದ್ದವರಾದರೆ ಇನ್ನು ಕಡಿಮೆ ಮಂದಿ ನಾಟಿ ಮಾಡಬಹುದು.

### ನೇರವಾಗಿ ಬಿತ್ತನೆ ಮಾಡುವುದು

ಕೆಲವು ಕಡೆ ಭತ್ತವನ್ನು ನೇರವಾಗಿ ಬಿತ್ತುವ ಪದ್ಧತಿ ಇರುತ್ತದೆ. ಈ ಪದ್ಧತಿಯನ್ನು ಶ್ರೀ ಪದ್ಧತಿಯಲ್ಲೂ ಸಹಾ ಉಪಯೋಗಿಸಬಹುದು. ಶ್ರೀ ಪದ್ಧತಿಯಲ್ಲಿ ನಾಟಿ ಮಾಡುವ ಅಂತರದಲ್ಲಿ ನೇರವಾಗಿ ಬಿತ್ತನೆ ಮಾಡಬಹುದು.

ಬೀಜಕ್ಕೆ ಮಣ್ಣು ಬಳೆದು ಬೀಜವನ್ನು ಸಗಣಿ ಉಂಡೆ ಮಾಡಿ ಜೊತೆಯಲ್ಲಿ (pilots / ಪೈಲಟ್ಸ್) ಬಿತ್ತುವ ಪ್ರಯೋಗಗಳು ಕೆಲವು ಕಡೆ ನಡೆಯುತ್ತಿವೆ. ಬಿದಿರು ಕೊಳವೆಗಳ (ಕೂರಿಗೆ) ಮುಖಾಂತರ ಬೀಜವನ್ನು ಬಿಡುವ ಮೂಲಕ ಶ್ರಮವನ್ನು ಕಡಿಮೆಮಾಡುವ ಪ್ರಯೋಗಗಳು ಜಾರಿಯಲ್ಲಿವೆ.

ನೇರವಾಗಿ ಬಿತ್ತುವುದಕ್ಕೆ ಸರಿಹೋಗುವಂತೆ ಭೂಮಿ ತಯಾರು ಮಾಡಿ ಮಾರ್ಕರ್ ಎಳೆದು ಗೆರೆ ಹಾಕಿಕೊಳ್ಳಬೇಕು. ಅದಕ್ಕೆ ಮೂರು ದಿವಸಗಳ ಮುಂಚೆ ಬೀಜವನ್ನು ನೀರಿನಲ್ಲಿ ನೆನಸಿ ಮೊಳಕೆ ಕಟ್ಟಬೇಕು. ಮೊಳಕೆ ಒಡೆದ ಬೀಜವನ್ನು ಮಾರ್ಕರ್ ಗೆರೆ ಸೇರುವ ಜಾಗದಲ್ಲಿ 1 ರಿಂದ 3 ಬೀಜ ಬೀಳುವಂತೆ ಹಾಕಬೇಕು. ಹಿಂದೆ ಇನ್ನೊಬ್ಬ ವ್ಯಕ್ತಿ ಸಾವಯವ ಗೊಬ್ಬರದಿಂದ ಬೀಜ / ಬೀಜಗಳನ್ನು ಮುಚ್ಚುತ್ತಾ ಬರಬೇಕು.

ಸಸಿ ಮಡಿಯಿಂದ ಸಸಿ ತೆಗೆದ ತಕ್ಷಣ ಗದ್ದೆಯಲ್ಲಿ ನಾಟಿ ಮಾಡುವುದರಿಂದ ಅಧಿಕ ಬಲವಾದ ಬೇರು ಬಿಡಲು ನಂತರ ಸಸಿ ತನ್ನ ಪೂರ್ತಿ ಸಾಮರ್ಥ್ಯದೊಂದಿಗೆ ಇಳುವರಿ ನೀಡಲು ಸಹಾಯಕಾರಿಯಾಗುತ್ತದೆ.



ಹೊಲದಲ್ಲಿ ನಾಟಿಯಾಗಲ್ಪಟ್ಟ ಸಸಿಗಳು



# 6. ಕಳೆ ನಿರ್ವಹಣೆ

ಶ್ರೀ ಪದ್ಧತಿಯಲ್ಲಿ ನೀರು ನಿಲ್ಲದಂತೆ ಮಾಡುವುದರಿಂದ ಕಳೆ ಹೆಚ್ಚಾಗಿ ಇರುತ್ತದೆ. ಕಳೆಯನ್ನು ಕೈಯಿಂದ ಕಿತ್ತು ಹೊರಗೆ ಬೀಸಾಕುವುದರ ಬದಲು ಅದನ್ನು ಭೂಮಿಯೊಳಗೆ ಸೇರಿಸಿಬಿಡಬೇಕು. ಇದಕ್ಕೆ "ವೀಡರ್" ಉಪಕರಣ ಬಳಸಲಾಗುತ್ತದೆ.

ನಂತರ ಹಸಿರೆಲೆಯಾಗಿ ಉಪಯೋಗಕ್ಕೆ ಬರುತ್ತದೆ. ಆದ್ದುದರಿಂದ ಅದನ್ನು ಬೆಳೆಯಲು ಬಿಟ್ಟು, ನಂತರ ಭೂಮಿಯೊಳಗೆ ಸೇರಿಸುತ್ತ ಇರಬೇಕು. ನಾಟಿ ಮಾಡಿದ 10ನೇ ದಿನಕ್ಕೆ ಒಂದು ಸಾರಿ, 20 ನೇ ದಿನಕ್ಕೆ ಮತ್ತೊಮ್ಮೆ ಬೆಳೆಯಲ್ಲಿ ಎರಡೂ ಕಡೆ ವೀಡರ್ ಉಪಯೋಗಿಸಿದರೆ ಕಳೆಯ ಸಮಸ್ಯೆ ಬಹಳಷ್ಟು ಪರಿಹರಿಸಬಹುದು. 30ನೇ ದಿನ, 40ನೇ ದಿನ, ವೀಡರ್ ಉಪಯೋಗಿಸುವುದರಿಂದ ಭತ್ತ ಸಸಿಗೆ ಗಾಳಿ ಚೆನ್ನಾಗಿ ಸಿಕ್ಕಿ ಬಲವಾಗಿ ಬೆಳೆಯುವುದರೊಂದಿಗೆ ಕವಲುಗಳು ಸಹಾ ಚೆನ್ನಾಗಿ ಬಿಡುತ್ತವೆ.

ಪ್ರತಿ ಎರಡು ಸಾಲುಗಳ ಮಧ್ಯ ಈ ವೀಡರ್‌ನ್ನು ಹಿಂದೆ ಮುಂದೆ ತಳ್ಳುತ್ತ ನಡೆಸಬೇಕು. ಕಳೆ ಸಸಿ ಚಿಕ್ಕದಾಗಿ ಇರುವಾಗಲೇ ಅಂದರೆ ನಾಟಿಮಾಡಿದ 10 ದಿನಗಳೊಳಗೆ ಮೊದಲನೇ ಸಲ ವೀಡರ್‌ನ್ನು ಹಾಕಿ ತಿರುಗಿಸಬೇಕು. ಭತ್ತದ ಸಸಿ ನಾಜೂಕಾಗಿ ಇದ್ದರು, ಕಳೆ ಕಡಿಮೆ ಇದ್ದರೂ ಅವಶ್ಯಕತೆಗೆ ಅನುಗುಣವಾಗಿ ವೀಡರ್‌ನಿಂದ ಅಲ್ಲದಿದ್ದರೂ ಕೂಲಿಯಾಳುಗಳಿಂದ ಕಳೆ ತೆಗೆಯಬಹುದು. ಮೊದಲ ಸಾರಿ ಕಳೆ ತೆಗೆದ ನಂತರ ಪ್ರತಿ 10 ದಿನಕ್ಕೆ ಒಂದು ಸಾರಿ ವೀಡರ್‌ನ್ನು ತಿರುಗಿಸಬೇಕು.



ವೀಡರ್ ತಿರುಗಿಸುವುದರಿಂದ ಕಳೆಯನ್ನು ನಿಯಂತ್ರಿಸುವುದು ಮೊದಲನೇ ಉಪಯೋಗ. ಕಳೆಯನ್ನು ಭೂಮಿಯೊಳಗೆ ಬೆರೆಸುವುದರಿಂದ ಭೂಮಿಯಲ್ಲಿ ಸಾವಯವ ಪದಾರ್ಥ ಸಿಗುತ್ತದೆ. ಅಂದರೆ, ಗದ್ದೆಯಲ್ಲಿ ಹಸಿರೆಲೆ ಬೆಳೆಸಿದಾಗ ಸಿಗುವ ಪ್ರಯೋಜನ ದೊರಕುತ್ತದೆ. ವೀಡರ್ ಬಳಸುವುದರಿಂದ ಭೂಮಿಯೊಳಗೆ ಗಾಳಿ ಸಹಾ ಹರಡುತ್ತದೆ. ಸಸಿಗಳ ಬೇರಿಗೆ ಗಾಳಿ ಚೆನ್ನಾಗಿ ಸಿಗುತ್ತದೆ. ಇದನ್ನೆ "ಏರೇಷನ್" ಎನ್ನುವರು ಈ ಎರಡರಿಂದ ಭೂಮಿಯಲ್ಲಿ ಅನೇಕ ವಿಧಗಳ ಸೂಕ್ಷ್ಮಜೀವಿಗಳು ಹೆಚ್ಚಾಗಿ ಬೆಳೆದು ಭತ್ತದ ಸಸಿಗಳಿಗೆ ಅವಶ್ಯವಿರುವ ಪೌಷ್ಟಿಕಾಂಶಗಳನ್ನು ಕೊಡುತ್ತವೆ.

**ಎಂತಹ ಪರಿಸ್ಥಿತಿಯಲ್ಲಿಯೂ, ಶ್ರೀ ಪದ್ಧತಿಯಲ್ಲಿ ರಸಾಯಿನಿಕ ಕಳೆ ನಾಶಕ ಔಷಧಿಗಳನ್ನು ಬಳಸಬಾರದು.**



ಮಂಡ್ಯ ವೀಡರ್

ಗುಜರಾತಿನಲ್ಲಿ "ಬರ್ಸೀಮ್" ಎಂಬ ಬೆಳೆಯನ್ನು ಭತ್ತದ ಜೊತೆಯಲ್ಲಿ ಬೆಳೆಯುವುದರಿಂದ ಕಳೆ ನಿಯಂತ್ರಿಸಿದ ಅನುಭವವಿದೆ. ಆದರೆ ನಮ್ಮ ರಾಜ್ಯದಲ್ಲಿ ಈ ಬೆಳೆಯನ್ನು ಮಾಡಲು ಸ್ವಲ್ಪ ಕಷ್ಟವಾದುದರಿಂದ ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಇಂತಹ ಬೆಳೆಗಳನ್ನು ಆಯ್ಕೆ ಮಾಡಿ ಕಳೆ ನಿರ್ವಹಣೆ ಮಾಡುವ ಪ್ರಯತ್ನ ಮಾಡಬಹುದು.

ಒಂದು ಎಕರೆಯಲ್ಲಿ ಕಳೆಯಂತ್ರವನ್ನು ಸಾಲುಗಳ ಮಧ್ಯ ತಿರುಗಿಸಿದರೆ 16 ಕಿಲೋಮೀಟರ್ ದೂರ ನಡೆಯುವುದಕ್ಕೆ ಸಮಾನ, ಅದಕ್ಕೆ ಕಳೆಯಂತ್ರದ ಬಳಕೆಯು ಚೆನ್ನಾಗಿ ಇರಬೇಕು ಹಾಗೂ ಬಳಸುವವರಿಗೆ ಸೂಕ್ತವಾಗಿರಬೇಕು.

### ಉಪಕರಣಗಳ ಬ್ಯಾಂಕು

ಖರ್ಚಿನ ಮತ್ತು ಸ್ಥಳೀಯವಾಗಿ ಸಿಗುವ ದೃಷ್ಟಿಯಿಂದಾಗಿ ವೀಡರ್ ಅಥವಾ ಮಾರ್ಕರ್‌ಗಳ ವಿಷಯವಾಗಿ ರೈತರು ಕಷ್ಟಪಡದೆ ಇರಲು ಪರಿಹಾರ : ಒಂದು ಹಳ್ಳಿಯಲ್ಲಿ ಅಥವಾ ಒಂದು ರೈತ ಸಂಘದಲ್ಲಿ ಕೆಲವು ಮಾರ್ಕರುಗಳು ವೀಡರ್‌ಗಳನ್ನು ಇಟ್ಟು ಉಪಕರಣಗಳ ಬ್ಯಾಂಕಿನಂತೆ ಮಾಡಬಹುದು, ಅವಶ್ಯಕತೆಗೆ ಅನುಗುಣವಾಗಿ ಅವುಗಳನ್ನು ಬಳಸಬಹುದು.

### ಕಳೆತೆಗೆಯುವ ಯಂತ್ರಗಳಿಗೆ ಇರಬೇಕಾದ ಮುಖ್ಯವಾದ ಅಂಶಗಳು:

- ನಾಟಿಮಾಡಿದ ಮೊದಲ ಹಂತದಲ್ಲಿ ಸಸಿಗಳ ಮದ್ಯ ಅಂತರ ಹೆಚ್ಚಾಗಿ ಇರುತ್ತದೆ. ಅದಕ್ಕೆ ಅನುಗುಣವಾಗಿ ವೀಡರಿನ "ಅಗಲವ"ನ್ನು ಮಾರ್ಪಾಡು ಮಾಡಿಕೊಳ್ಳುವಂತೆ ಇರಬೇಕು.
- ಮಣ್ಣು ಅಂಟಿಕೊಳ್ಳದಂತೆ ಬಿದ್ದುಹೋಗಲು ವ್ಯವಸ್ಥೆ ಮಾಡಿರಬೇಕು.
- ಕಡಿಮೆ ಖರ್ಚು, ಸ್ಥಳೀಯವಾಗಿ ತಯಾರು ಮಾಡಿಕೊಳ್ಳುವಂತಿರಬೇಕು.
- ಹಗುರವಾಗಿರಬೇಕು.
- ನಡೆಯುವ ದೂರ ಕಡಿಮೆಯಾಗುವಂತೆ ವಿನ್ಯಾಸವಾಗಿರಬೇಕು.
- ಮೋಟರ್‌ನಿಂದ ನಡೆಸುವ ವೀಡರಾಗಿದ್ದರೆ ಕೆಲಸದ ಭಾರ ಕಡಿಮೆಯಾಗುತ್ತದೆ.


ಕೋನೋ ವೀಡರ್


ಕೊಲ್ಲೂರು ವೀಡರ್


ಸಿಂಗಿಲ್ ಡ್ರಮ್ ವೀಡರ್


ಮೆಕನೈಜ್ಡ್ ವೀಡರ್


ಜಪಾನ್ ವೀಡರ್


ರಾಯಚೂರ ವೀಡರ್


ಸ್ಟಾರ್ ವೀಡರ್

### ಮಂಡವ ವೀಡರ್



ಮಾಮೂಲಿಯಾಗಿ ಈಗ "ಶ್ರೀ" ರೈತರು ವೀಡರ್‌ಗಳನ್ನು ಖರೀದಿ ಮಾಡುವುದು ಅಧಿಕವಾಗಿದೆ. ವಿನ್ಯಾಸಗಳಲ್ಲಿ ಸಹಾ ಕೆಲವು ಸಮಸ್ಯೆಗಳಿವೆ. ಸಮಸ್ಯಾತ್ಮಕ ಭೂಮಿಗಳಲ್ಲಿ ಇವುಗಳನ್ನು ಬಳಸುವಾಗ ಆನೇಕ ಅಡೆ ತಡೆಗಳು ಬರುತ್ತಿವೆ. ವಿವಿಧ ವೀಡರ್‌ಗಳಲ್ಲಿ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸುವ ರೀತಿಯಲ್ಲಿ ಅವಶ್ಯ ತಾಂತ್ರಿಕ ಮಾರ್ಪಾಡುಗಳಿಂದ ರೂಪಿಸಿದೆ. "ಮಂಡವ" ವೀಡರ್ ಖಮ್ಮಂ ಜಿಲ್ಲೆಯಲ್ಲಿನ (ಆಂಧ್ರ ಪ್ರದೇಶ ರಾಜ್ಯದ) ಚಿಕ್ಕ ಮಂಡವ ಗ್ರಾಮದಲ್ಲಿ ತಯಾರಿಸಿದ ವೀಡರ್‌ನ್ನು ಈ ಊರಿನ ಹೆಸರಿನ ಮೇಲೆ "ಮಂಡವ" ವೀಡರ್ ಎಂದು ಕರೆಯುತ್ತಾರೆ.

**ಕಡಿಮೆ ಖರ್ಚು** : ಸುಮಾರು 550/– ರೂಪಾಯಿಗಳ ಖರ್ಚಿನೊಳಗೆ ತಯಾರು ಮಾಡಬಹುದು.

**ಸುಲಭವಾದ ವಿನ್ಯಾಸ** : ಭಾರ ಕಡಿಮೆ, ಎಲ್ಲಾ ತರಹದ ಭೂಮಿಯಲ್ಲಿ ಕಾರ್ಯನಿರ್ವಹಿಸುತ್ತದೆ.

**ತಾಂತ್ರಿಕತೆ** : ಕಳೆ ಸಸಿಗಳನ್ನು ಕೆಸರಿನ ಆಳಕ್ಕೆ ತುಳಿಯುತ್ತದೆ.

**ಉಪಯೋಗ** : ಉಪಯೋಗಿಸುವಾಗ ಶ್ರಮ ಕಡಿಮೆ, ದಣಿವು ಕಡಿಮೆ, ಅವಶ್ಯಕತೆಗೆ ಅನುಗುಣವಾಗಿ ಬಳಸಬಹುದು.

## 7. ನೀರಿನ ನಿರ್ವಹಣೆ

ಸಾದಾರಣವಾಗಿ ರೈತರು ಕಳೆ ನಿಯಂತ್ರಿಸಲು ನೀರು ಹೆಚ್ಚಿಗೆ ಬಿಡುತ್ತಿರುತ್ತಾರೆ. ಕಾಲುವೆಗಳ ಪ್ರದೇಶಗಳೆ ಅಲ್ಲದೆ ಕೆರೆ ಬೋರ್‌ಗಳಿಂದ ಸಹಾ ಬೆಳೆಗೆ ಬೇಕಾಗಿರುವ ನೀರಿಗಿಂತ ಹೆಚ್ಚಿನ ನೀರಿನ ಉಪಯೋಗ ಮಾಡುತ್ತಿರುತ್ತಾರೆ. ನೀರು ನಿಂತರೆ ಏನಾಗುತ್ತದೆ? ಗಾಳಿ ಸರಿಯಾಗಿ ಹರಡದೆ ಭತ್ತದ ಸಸಿಯ ಬೇರು ಆರೋಗ್ಯಕರವಾಗಿ ಬೆಳೆಯವುದಿಲ್ಲ.

ಆದುದರಿಂದ ಶ್ರೀ ಪದ್ಧತಿಯಲ್ಲಿ ಗದ್ದೆಗಳಲ್ಲಿ ನೀರು ನಿಲ್ಲದಂತೆ ಮಾಡುತ್ತಾರೆ. ಗದ್ದೆ ನೆನೆಯುವಂತೆ ಮಾತ್ರವೇ ನೀರು ಬಿಡುತ್ತಾರೆ. ಗದ್ದೆ ಸಣ್ಣ ಬಿರುಕು ಬಿಡುತ್ತಿರುವ ಹಂತದಲ್ಲಿ ಮತ್ತೇ ನೀರು ಬಿಡಬೇಕು. ಭೂಮಿಯ ವಾತವರಣಗಳಿಗೆ ಅನುಗುಣವಾಗಿ ಎಷ್ಟು ದಿನಗಳಿಗೊಮ್ಮೆ ನೀರು ಬಿಡಬೇಕು ಎಂದು ತೀರ್ಮಾನ ಮಾಡಿಕೊಳ್ಳಬೇಕು.

ನೀರು ನಿಲ್ಲದಂತೆ ಮಾಡುವುದರಿಂದ ಭತ್ತದ ಸಸಿಯ ಬೇರು ಆರೋಗ್ಯಕರವಾಗಿ, ಆಳವಾಗಿ, ಎಲ್ಲಾ ಕಡೆ ವಿಸ್ತರಿಸುತ್ತದೆ. ಹೆಚ್ಚಿನ ಅಂತರ ವಿಟ್ಟು ನಾಟಿಮಾಡುವುದರಿಂದ ಸಸಿಗಳ ಬೇರು ಚೆನ್ನಾಗಿ ಹರಡುತ್ತದೆ. ಗದ್ದೆಯನ್ನು ನೆನೆಸುತ್ತಾ ಒಣಗಿಸುವುದರಿಂದ ಭೂಮಿಯೊಳಗಿನ ಸೂಕ್ಷ್ಮ ಜೀವಿಗಳು ಚೆನ್ನಾಗಿ ವೃದ್ಧಿಯಾಗಿ ಸಸಿಗಳಿಗೆ ಪೌಷ್ಠಿಕಾಂಶಗಳನ್ನು ನೀಡುತ್ತವೆ.

ಒಂದು ದಿನದ ಮುಂಚೆ ತೆಳುವಾಗಿ ನೀರು ನಿಲ್ಲುವಂತೆ ಮಾಡಿ ವೀಡರ್‌ನ್ನು ನಡೆಸಬೇಕು. ವೀಡರ್ ಉಪಯೋಗಿಸಿದ ನಂತರ ಎಂತಹ ಪರಿಸ್ಥಿತಿಯಲ್ಲೂ ಆ ಗದ್ದೆಯ ಹಳೆಯ ನೀರನ್ನು ಕೆಳಗಿನ ಗದ್ದೆಗೆ ಬಿಡಬಾರದು. ಹಾಗೆ ಮಾಡಿದರೆ ಆ ಗದ್ದೆಯ ಪೌಷ್ಠಿಕಾಂಶಗಳು ಹೊರಗೆ ಹೋಗುವ ಸಾಧ್ಯತೆಯಿದೆ.

ಭತ್ತದ ಪೈರು ವಡೆ (ಮೊಗ್ಗು) ಬಿಡುವ ಹಂತಕ್ಕೆ ಬಂದಾಗಿನಿಂದ ಒಂದು ಅಂಗುಲದವರಗೆ ನೀರು ನಿಲ್ಲುವಂತೆ ಮಾಡಬೇಕು. ಬೀಜಗಳು ಶೇಕಡಾ 70% ಗಟ್ಟಿ ಯಾಗುವವರಗೆ ನೀರು ನಿಲ್ಲಿಸಬೇಕು ನಂತರ ನೀರು ಹೊರ ಹಾಕಬೇಕು.

ಭೂಮಿ ಸಮತಲವಿಲ್ಲದ್ದಿದರೆ ನೀರು ಒಂದೇ ಕಡೆ ನಿಲ್ಲುತ್ತದೆ, ಇನ್ನೊಂದು ಕಡೆ ಭೂಮಿ ನೆನೆಯದಂತೆ ಒಣಗಿಹೋಗುತ್ತದೆ. ನೀರನ್ನು ಸಮರ್ಪಕವಾಗಿ ಬಳಸಬೇಕಾದರೆ ಗದ್ದೆಗಳು ಚಿಕ್ಕದಾಗಿ ಸಮತಟ್ಟಾಗಿರಬೇಕು,

ಭೂಮಿ ಪೂರ್ತಿಯಾಗಿ ನೆನೆಯುವವರಗೆ (ಸ್ಥಳೀಯ ಪರಿಸ್ಥಿಗಳ ಆಧಾರದ ಮೇಲೆ), ನೀರಿನ ಸರಬರಾಜು ಇದ್ದರೆ ಗದ್ದೆ ಪೂರ್ತಿ ನೆನೆಯುತ್ತದೆ. ಒಂದು ವೇಳೆ ನೀರು ಹೆಚ್ಚಾಗಿ ಹೊರಗೆ ತೆಗೆಯ ಬೇಕಾದ ಪರಿಸ್ಥಿತಿ ಬಂದಾಗ ಆ ನೀರನ್ನು ಒಡ್ಡಿನ ಮೇಲಿನ ಗಿಡಗಳಿಗೆ ಅಥವಾ ಕೆಳಗೆ ಇರುವ ಚಿಕ್ಕ ಗದ್ದೆಗಳಲ್ಲಿ ತರಕಾರಿ ಬೆಳೆಯಲು ಉಪಯೋಗಿಸಿಕೊಳ್ಳಬೇಕು.

ಭತ್ತದ ಸಸಿ ನೀರಿನಲ್ಲಿ ಸಹಾ ಬೆಳೆಯುತ್ತದೆ. ಆದರೆ ಇದಕ್ಕೆ ನೀರನ್ನು ನಿಲ್ಲಿಸಬೇಕು ಎಂಬುವುದಿಲ್ಲ.







ಶ್ರೀ ಪದ್ಧತಿಯಲ್ಲಿ ಅವಶ್ಯವಿದ್ದಾಗ ಬೆಳೆಗಳಿಗೆ ನೀರು ಬಿಡಲು ನೀರಿನ ವ್ಯವಸ್ಥೆ ಇರಬೇಕು. ಬೋರಿನಿಂದ ಸಾಗುವಳಿ ಮಾಡುವಾಗ ಕರೆಂಟು ಇರುವುದಿಲ್ಲ ಅಥವಾ ಮೋಟರ್ ಕೆಟ್ಟು ಹೋಗಬಹುದು ಎಂಬ ಭಯದಿಂದ ಮುಂಚಿತವಾಗಿ ನೀರನ್ನು ನಿಲ್ಲುಸುವ ವ್ಯವಸ್ಥೆ ಮಾಡಿರುತ್ತಾರೆ. ಇದಕ್ಕೆ ಬೇಕಾಗಿರುವ ಪರಿಹಾರವನ್ನು ಮೊದಲೇ ವಿಚಾರ ಮಾಡಿರಬೇಕು.

ಶ್ರೀ ಪದ್ಧತಿಯಲ್ಲಿ ನಂಬಿಕೆ ಬರುವವರೆಗೆ ರೈತರು ಕೆಲವು ಪದ್ಧತಿಗಳನ್ನು ಪಾಲಿಸಬಹುದು. ಉದಾಹರಣೆಗೆ ಗದ್ದೆಯಲ್ಲಿ ಬಿರುಕು ಬರುವವರಗೆ ನೀರು ಬಿಡದೆ ಇರುವುದರ ಬದಲು ರೈತರು ನೀರು ಬಿಡುವ ಸಮಯವನ್ನು ಕ್ರಮವಾಗಿ ಹೆಚ್ಚಿಸುತ್ತ ಹೋಗಬಹುದು.



## 8. ಕೀಟ ರೋಗಗಳ ನಿರ್ವಹಣೆ



ರಸಾಯನಿಕ ಗೊಬ್ಬರ ಉಪಯೋಗಿಸದೆ ಇರುವುದು, ಕೀಟನಾಶಕಗಳನ್ನು ಉಪಯೋಗಿಸದೆ ಇರುವುದು, ಕಳೆ ನಿಯಂತ್ರಣ ರಸಾಯನಿಕ ಪದಾರ್ಥಗಳನ್ನು ಉಪಯೋಗಿಸದೆ ಇರುವುದು ಶ್ರೀ ಪದ್ಧತಿ ವೈಶಿಷ್ಟ್ಯ. ದೂರವಾಗಿ ನಾಟಿಮಾಡುವುದು, ಸಾವಯವ ಗೊಬ್ಬರದ ಬಳಕೆಯಿಂದ ಭತ್ತದ ಸಸಿ ಆರೋಗ್ಯಕರವಾಗಿ ಬೆಳೆದು ಕೀಟ, ರೋಗಗಳು ಸಹಜವಾಗಿ ಕಡಿಮೆ ಆಗುತ್ತದೆ. ಅವಶ್ಯ ಬಿದ್ದಾಗ, ಅಥವಾ ಮೊದಲೇ ಕೆಲವು ತರಹದ ಕಷಾಯಗಳನ್ನು ಸಿಂಪಡಿಸುವುದರಿಂದ ಅವುಗಳನ್ನು ಸುಲಭವಾಗಿ ನಿಯಂತ್ರಣ ಮಾಡಬಹುದು. ಆಮೃತಜಲ ಅಂತಹ ಒಂದು ಕಷಾಯ.

### ಆಮೃತಜಲ ತಯಾರು ಮಾಡುವ ವಿಧಾನ



**ಬೇಕಾಗಿರುವ ಪದಾರ್ಥಗಳು**

ಹಸು ಗಂಜಲ 1 ಲೀಟರ್
ಹಸು ಸಗಣಿ 1 ಕೆ.ಜಿ
ಬೆಲ್ಲ (ಸಾವಯವ) 4 ಕೆ.ಜಿ (250 ಗ್ರಾಂ)
ಕ್ಲೋರಿನ್ ಬೆರೆಸಿದ ನೀರು 10 ಲೀಟರ್

**ತಯಾರು ಮಾಡುವ / ಬಳೆಸುವ ಪದ್ಧತಿ**

ಎಲ್ಲಾ ಒಂದು ಪ್ಲಾಸ್ಟಿಕ್ ಡಬ್ಬ ಅಥವಾ ಮಣ್ಣಿನ ಮಡಿಕೆಯಲ್ಲಿ ಬೆರಸಿ 24 ಗಂಟೆ ಇಡಬೇಕು. ಆನಂತರ ಪ್ರತಿ ಲೀಟರ್ ಆಮೃತಜಲಕ್ಕೆ 10 ಲೀಟರ್ ನೀರು ಬೆರಸಿ ನೈಲಾನ್ ಬಲೆಯಲ್ಲಿ ಸೋದಿಸಬೇಕು. ಸೋದಿಸಿದ ದ್ರಾವಣವನ್ನು ಪಿಚಕಾರಿಗೆ ತುಂಬಬೇಕು. ಆಮೃತಜಲವನ್ನು 30 ದಿನಗಳವರಗೆ ದಾಸ್ತಾನು ಮಾಡಬಹುದು. ಅದರೆ ಪ್ರತಿದಿನ ದ್ರಾವಣವನ್ನು ತಿರುಗಿಸುತ್ತಾ ಇರಬೇಕು. ಯೂರಿಯಾ ಹಾಕಿದಾಗ ಸಸಿಗಳು ನಾಜೂಕಾಗಿ ಬೆಳೆದು, ಕೀಟ, ರೋಗಗಳಿಗೆ ಹೆಚ್ಚಿಗೆ ಆಕರ್ಷಿತವಾಗುತ್ತವೆ. ಆದರೆ ಆಮೃತಜಲ ಹಾಕಿದಾಗ ಸಸಿಗಳಿಗೆ ಸಾರಜನಕ ಸಿಗುವುದಲ್ಲದೆ ಹಾನಿಮಾಡುವ ಕೀಟ, ಸೂಕ್ಷ್ಮಜೀವಿಗಳನ್ನು ದೂರವಿಡುತ್ತದೆ. ಚೆನ್ನಾಗಿ ಬೆಳೆದ ಒಂದು ಎಕರೆ ಗದ್ದೆಗೆ ಎಮ್ಮೆ / ಹಸು / ಎತ್ತುಗಳ ಗಂಜಲ 20 ಲೀಟರ್, 20 ಕೆಜಿ ಸಗಣಿ, 5 ಕೆಜಿ ಬೆಲ್ಲ, 150 ಲೀಟರ್ ನೀರು ಬೇಕಾಗುತ್ತದೆ. ಸಿಂಪಡಿಸುವುದು ಸಾಧ್ಯವಿಲ್ಲದಿದ್ದರೆ, ಗದ್ದೆಗೆ ನೀರು ಬಿಡುವಾಗ ಕಾಲುವೆ, ಪ್ರಾರಂಭದಲ್ಲಿ ನೀರಿನೊಂದಿಗೆ ಆಮೃತಜಲವನ್ನು ಬೆರಸಿ ಬಳಸಬಹುದು.

## ಭತ್ತಕೊಯ್ಲು



ಗದ್ದೆ ಹಸಿರಾಗಿ ಇರುವಾಗಲೇ ಕಾಳು/ಬೀಜ ತಯಾರಾಗುತ್ತವೆ. ಅದರಿಂದ ಕೊಯ್ಲು ಮಾಡಲು ಬೇಕಾದ ಸಿದ್ದತೆಯನ್ನು ರೈತರು ಮೊದಲೇ ಮಾಡಿಕೊಳ್ಳಬೇಕು.







## ಶ್ರೀ ಪದ್ಧತಿಯಿಂದ ಲಾಭಗಳು

- ಕಡಿಮೆ ಬೀಜ ಬೇಕಾಗಿರುವುದರಿಂದ ಬೀಜ ಕೊಳ್ಳುವ ಖರ್ಚಿನಲ್ಲಿ ಉಳಿತಾಯ.
- ಅರ್ಧ ನೆನೆಸುವ ಪದ್ಧತಿಯಿಂದ ನೀರಿನ ಉಪಯೋಗದಲ್ಲಿ ಉಳಿತಾಯ.
- ರಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆಯಿಲ್ಲದಿರುವುದರಿಂದ ಅವುಗಳಿಗೆ ಮಾಡುವ ಖರ್ಚು ಕಡಿಮೆ ಆಗುತ್ತದೆ.
- ಗದ್ದೆ ಅಂಕಣಗಳು ಚಿಕ್ಕದಾಗಿ ಇರುವುದರಿಂದ ಕೀಟ, ರೋಗಗಳ ವೃದ್ಧಿ ಕಡಿಮೆ.
- ಸಾವಯವ ಪದ್ಧತಿಯಿಂದ ಆರೋಗ್ಯಕರವಾಗಿ, ರುಚಿಕರವಾದ ಅಕ್ಕಿ ಪಡೆಯಬಹುದು.



ಶ್ರೀ ಪದ್ಧತಿಯಲ್ಲಿ ಭತ್ತದ ಬೆಳೆ



ಸಾಂಪ್ರದಾಯ ಭತ್ತದ ಬೆಳೆ

- ಉದ್ದವಾದ ತೆನೆ ಬೀಜದ ಬಾರ ಹೆಚ್ಚಾಗಿ ಇಳುವರಿ ಬರುವ ಅವಕಾಶ ಹೆಚ್ಚು.
- ಕಡಿಮೆ ಬೀಜದಿಂದ ಬೀಜೋತ್ಪತ್ತಿ ಮಾಡಬಹುದು.
- ಯಾರು ಬೇಕಾದರೂ ಒಳ್ಳೆಯ ಗುಣಮಟ್ಟ ಬೀಜ ತಯಾರು ಮಾಡಿಕೊಳ್ಳಬಹುದು.